ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೬೭
ವಿಚಾರ ಸಾಹಿತ್ಯಮಾಲೆ – ೮೦
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
**ಡಾ. ಪ್ರಧಾನ್ ಗುರುದತ್ತ**

ಸಂಪಾದಕರು
**ಡಾ. ಎ. ವಿ. ನರಸಿಂಹಮೂರ್ತಿ**

# ಭೂಮಿಯ ಮೇಲೆ ಶಾಂತಿ

## ಭವನದ ಗ್ರಂಥ ವಿಶ್ವವಿದ್ಯಾನಿಲಯ

ಮಾಲೆಯ
ಮೂಲ ಸಂಪಾದಕರು
**ಆರ್. ಆರ್. ದಿವಾಕರ್**
**ಎಸ್. ರಾಮಕೃಷ್ಣನ್**

ವ್ಯವಸ್ಥಾಪಕ ಮಂಡಳಿ
**ಲೀಲಾವತಿ ಮುನ್ಷಿ** – ಅಧ್ಯಕ್ಷೆ
**ಕೆ. ಕೆ. ಬಿರ್ಲಾ** – ಸದಸ್ಯರು
**ಎಸ್. ಜಿ. ನೇವಾತಿಯ** – ಸದಸ್ಯರು
**ಜಿ. ಎಚ್. ದವೆ** – ಸದಸ್ಯರು
**ಎಸ್. ರಾಮಕೃಷ್ಣನ್** – ಸದಸ್ಯರು

**ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿ**

**ಎನ್. ರಾಮಾನುಜ** – ಅಧ್ಯಕ್ಷರು
(ಅಧ್ಯಕ್ಷರು, ಭಾರತೀಯ ವಿದ್ಯಾ ಭವನ, ಕರ್ನಾಟಕ)

**ಎಚ್. ಎನ್. ಸುರೇಶ್**
(ನಿರ್ದೇಶಕರು, ಭಾರತೀಯ ವಿದ್ಯಾ ಭವನ, ಬೆಂಗಳೂರು)

**ಡಾ. ಎ. ವಿ. ನರಸಿಂಹಮೂರ್ತಿ**
(ಅಧ್ಯಕ್ಷರು, ಭಾರತೀಯ ವಿದ್ಯಾ ಭವನ, ಮೈಸೂರು)



# ಭೂಮಿಯ ಮೇಲೆ ಶಾಂತಿ

**ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ**
**(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)**
**–ಋಗ್ವೇದ, I ೮೯–೧**

ಮೂಲ
**ಪೋಪ್ ಜಾನ್ ಪಾಲ್ ೨೩**

ಅನುವಾದ
**ಎ. ಶ್ರೀಲತಾ**

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ,** ಬೆಂಗಳೂರು
ಮತ್ತು
**ಭಾರತೀಯ ವಿದ್ಯಾ ಭವನ,** ಮೈಸೂರು

**Bhumiya Mele Shanti:** Kannada translation of *Peace on Earth* : **Pope John Pal xxiii;** Kannada translation by **A. Srilatha;** Editor-in-Chief: **Dr. Pradhan Gurudatta;** Editor of the series: **Dr. A. V. Narasimha Murthy;** Published under the joint auspices of **Kuvempu Bhasha Bharati Pradhikara,** Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara; 2013; Pp. xxii + 30. Price : Rs. 10/-

© ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

ಮುದ್ರಣ : ೨೦೧೩
ಪುಟಗಳು : xxii + ೩೦
ಬೆಲೆ : ರೂ. ೧೦/-

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯ ಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಮುನ್ನುಡಿ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿರುವ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ವಿಕ್ರಮಗಳನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಸಂತೋಷದಾಯಕ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡದಲ್ಲಿ ಮತ್ತು ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರಪ್ರಶಸ್ತಿ ಪುರಸ್ಕೃತ ಲೇಖಕರ ಮತ್ತು ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ 'ಸಂಚಯ'ಗಳನ್ನು ಹೊರತರುತ್ತಿರುವುದು ಶ್ಲಾಘನೀಯವಾಗಿದೆ. ಈಗಾಗಲೇ ಕುವೆಂಪು, ಪುತಿನ ಮತ್ತು ಜಿ.ಎಸ್.ಶಿವರುದ್ರಪ್ಪ ಅವರ ಸಂಚಯಗಳನ್ನು ಪ್ರಕಟಿಸಿರುವ ಪ್ರಾಧಿಕಾರ ಜ್ಞಾನಪೀಠ ಪ್ರಶಸ್ತಿ ಮತ್ತು ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇವುಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ–ಗರಿಮೆಗಳು ಸಾರಸ್ವತ ಲೋಕದಲ್ಲಿ ಮತ್ತಷ್ಟು ವೃದ್ಧಿಸಲಿವೆ. ಭಾರತೀಯ ಇತಿಹಾಸ, ಧರ್ಮ ಮತ್ತು ಸಂಸ್ಕೃತಿ–ಸಾಹಿತ್ಯಗಳನ್ನು ಕುರಿತ ಮಹತ್ವದ ಗ್ರಂಥಗಳನ್ನು ಹೊರತಂದಿರುವ ಭಾರತೀಯ ವಿದ್ಯಾ ಭವನದ **'ಪುಸ್ತಕ ವಿಶ್ವವಿದ್ಯಾನಿಲಯ'** ಮಾಲೆಯ ೨೫ ಗ್ರಂಥಗಳು ಈಗಾಗಲೇ ಹೊರಬಂದಿದ್ದು, ಇನ್ನೂ ೨೫ ಗ್ರಂಥಗಳು ಅಚ್ಚಿನಲ್ಲಿರುವುದು ವಿಶೇಷವಾಗಿ ಉಲ್ಲೇಖನೀಯ. ಜ್ಞಾನ–ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಕ್ಕೂ ಕೊಡುಗೆಯಾಗಿ ನಿಲ್ಲಬಲ್ಲಂತಹ ಮಹತ್ವದ ಮೌಲಿಕ ಕೃತಿಗಳನ್ನು ಪ್ರಾಧಿಕಾರ ಹೊರತರುತ್ತಿರುವುದು ಎಲ್ಲರ ಮೆಚ್ಚಿಕೆಗೆ ಪಾತ್ರವಾಗುತ್ತದೆ.

ವಿಲ್ ಡ್ಯೂರಾಂಟ್ ಅವರ ವಿಶ್ವಕೋಶ ಸದೃಶವಾಗಿರುವ **'ನಾಗರಿಕತೆಯ ಇತಿಹಾಸ'**ದ ಸಂಪುಟಗಳು ಹಾಗೂ ಜೆ.ಡಿ.ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'** ಸಂಪುಟಗಳು ಇದೇ ಮೊದಲ ಬಾರಿಗೆ ಭಾರತೀಯ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಮತ್ತು ಆ ಹೆಮ್ಮೆ ಕನ್ನಡದ್ದಾಗಿರುವುದು ವಿಶೇಷತೆಗಳಲ್ಲಿ ವಿಶೇಷತೆಯಾಗಿದೆ. **'ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್'** ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ, ಇನ್ನೂ ಅನುವಾದಿತವಾಗದಿರುವ ಅವರ ಇತರ ಸಂಪುಟಗಳ ಅನುವಾದದ ಪ್ರಕಟಣೆ,

**'ಕನಕದಾಸರ ಕೃತಿ'**ಗಳ ಅನುವಾದ ಯೋಜನೆ, ಮುಂತಾದವು ಪ್ರಾಧಿಕಾರದಲ್ಲಿ ಹೊಸ ಮೈಲಿಗಲ್ಲನ್ನು ಸ್ಥಾಪಿಸಲಿವೆ.

ಪ್ರಾಧಿಕಾರದ ಧ್ಯೇಯೋದ್ದೇಶಗಳನ್ನು ಗಮನಿಸಿ, ನಾಡಿನ ಶ್ರೇಷ್ಠ ವಿದ್ವಾಂಸರು ಸಲಹೆ–ಸೂಚನೆ–ಸಹಕಾರಗಳನ್ನು ನೀಡುತ್ತ, ಪ್ರಾಧಿಕಾರ ಬಹುಮುಖೀ ಸಾಧನೆಗಳನ್ನು ಮಾಡಲು ನೆರವಾಗುತ್ತಿರುವುದೂ, ಪ್ರಾಧಿಕಾರದ ಆಶ್ರಯದಲ್ಲಿ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು, ತರಬೇತಿ ಶಿಬಿರಗಳನ್ನು, ವಿಚಾರ ಸಂಕಿರಣಗಳನ್ನು ನಡೆಸುತ್ತಿರುವುದು, ಜೊತೆಗೆ ಇಂತಹ ಎಲ್ಲ ಕಾರ್ಯಕ್ರಮಗಳಿಂದಾಗಿ ಪ್ರಾಧಿಕಾರವು 'ಸಂಶೋಧನ ಕೇಂದ್ರ' ಎಂದು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಪಡೆದುಕೊಂಡಿರುವುದು – ಇವೆಲ್ಲವೂ ನನ್ನಲ್ಲಿ ಹರ್ಷವನ್ನು ಉಂಟುಮಾಡಿದೆ.

ಪ್ರಾಧಿಕಾರದ ಎಲ್ಲ ಚಟುವಟಿಕೆಗಳಲ್ಲಿ ಕನ್ನಡ ನಾಡಿನ ಜನತೆ ಆಸಕ್ತಿಯಿಂದ ಪಾಲ್ಗೊಳ್ಳಲಿ ಹಾಗೂ ಪ್ರಾಧಿಕಾರದ ಪ್ರಕಟಣೆಗಳನ್ನು ಪ್ರೀತಿ–ವಿಶ್ವಾಸಗಳಿಂದ ಸ್ವಾಗತಿಸಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

(ಸಿದ್ದರಾಮಯ್ಯ)



ಕರ್ನಾಟಕ ಸರ್ಕಾರ

**ಉಮಾಶ್ರೀ**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇದು ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಇದು ಈಗಾಗಲೇ ಹಲವು ವಿಶ್ವವಿದ್ಯಾಲಯಗಳ ಮಾನ್ಯತೆಯನ್ನುಗಳಿಸಿರುವುದು ಹಾಗೂ ಸಂಶೋಧನೆ ಕೇಂದ್ರವೆಂಬ ಹಿರಿಮೆಯೂ ಲಭಿಸಿರುವುದು ಗೌರವಾರ್ಹ ಸಂಗತಿಯಾಗಿದೆ. ಕನ್ನಡ ನೆಲ–ಜಲಗಳ ವಿಷಯದಲ್ಲಿ ಆಸಕ್ತವಾಗಿರುವ ಈ ಪ್ರಾಧಿಕಾರ ಈಗಾಗಲೇ 'ಕಾವೇರಿ ನ್ಯಾಯಾಧಿಕರಣದ ತೀರ್ಪಿ'ನ ಕನ್ನಡ ಆವೃತ್ತಿಯನ್ನು ಹೊರತಂದಿದ್ದು, ಈಗ 'ಕೃಷ್ಣಾ ನ್ಯಾಯಾಧಿಕರಣದ ತೀರ್ಪಿನ' ಕನ್ನಡ ಆವೃತ್ತಿಯನ್ನು ಹೊರತರಲು ಮುಂದಾಗಿರುವುದು ಪ್ರಶಂಸನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವ ಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿ ಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು, ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಈ ರೀತಿಯ ಉತ್ತಮ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರುವ ಪ್ರಾಧಿಕಾರವು ಮುಂದಿನ ದಿನಗಳಲ್ಲಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಸಂಸ್ಥೆಯಾಗಿ ಬೆಳೆಯಲೆಂದು ಹಾರೈಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

**ಬಸವರಾಜು,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

ವಿಧಾನಸೌಧ
ಬೆಂಗಳೂರು – ೫೬೦ ೦೦೧

# ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಗಳಾಗುತ್ತವೆ ಎಂದು ನಂಬಿದ್ದೇವೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೃತಿಗಳ ಆಂಶಿಕ ಪರಿಷ್ಕರಣ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊಸ ರೂಪದಲ್ಲಿ ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪ್ರಕಟಣೆಗಳಿಗೆ ಮಾತ್ರವೇ ತನ್ನನ್ನು ಸೀಮಿತಗೊಳಿಸಿಕೊಳ್ಳದೆ, ಭಾರತೀಯ ಭಾಷೆಗಳ ಮತ್ತು ವಿದೇಶಿ ಭಾಷೆಗಳ ಅನುವಾದ ಶಿಕ್ಷಣಕ್ಕೆ ಮತ್ತು ಸಂಶೋಧನೆಗೆ ಇಂಬುಕೊಡಲಿರುವ ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸಂಶೋಧನ ಚಟುವಟಿಕೆಗಳನ್ನು ಕೈಗೊಳ್ಳಲು ಮುಂದಾಗುತ್ತಿರುವುದು ಮತ್ತು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಗಳಿಸಿಕೊಳ್ಳುತ್ತಿರುವುದು ವೈಯಕ್ತಿಕವಾಗಿಯೂ ನನಗೆ ವಿಶೇಷ ಸಂತೋಷವನ್ನುಂಟುಮಾಡುತ್ತಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ–ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

(ಬಸವರಾಜು)



ಕರ್ನಾಟಕ ಸರ್ಕಾರ

**ಕೆ.ಆರ್. ರಾಮಕೃಷ್ಣ,** ಭಾ.ಆ.ಸೇ.
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

# ಪ್ರಾಸ್ತಾವಿಕ ನುಡಿ

ಕರ್ನಾಟಕ ಸರ್ಕಾರ 2005ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿ, ಸಾಹಿತ್ಯಿಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಭಾರತೀಯ ಮತ್ತು ವಿದೇಶಿಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದರ ಹಾಗೂ ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು ಮತ್ತು ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು ಹಾಗೂ ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ, ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು, ಭಾಷಾಂತರದ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಮತ್ತು ತರಬೇತಿಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ.ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕನಕದಾಸರ ಕೃತಿಗಳ ಅನುವಾದ ಯೋಜನೆ, ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡದ ಅನುವಾದದ

ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಭಾರತೀಯ ವಿದ್ಯಾಭವನದಂತಹ ಸಂಸ್ಥೆಗಳೊಂದಿಗೆ ಮತ್ತು ಇತರ ವಿಶ್ವವಿದ್ಯಾಲಯಗಳೊಡನೆ ಜಂಟಿ ಪ್ರಕಟಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು, ಇಂಥ ಕಾರ್ಯಕ್ರಮಗಳಲ್ಲಿ ನಾಡಿನ ಖ್ಯಾತ ವಿದ್ವಾಂಸರು ಪಾಲ್ಗೊಳ್ಳುತ್ತಿರುವುದು ಕನ್ನಡಿಗರೆಲ್ಲ ಹೆಮ್ಮೆಪಟ್ಟುಕೊಳ್ಳಬಹುದಾದ ಬೆಳವಣಿಗೆಗಳೇ ಆಗಿವೆ ಎಂದು ನಂಬಿದ್ದೇನೆ. ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಿಕ-ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

(ಕೆ. ಆರ್. ರಾಮಕೃಷ್ಣ)



## ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದುವು. ದೇಶ-ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು.

ಶ್ರೀ ಕುವೆಂಪು ಅವರ ಶೈಕ್ಷಣಿಕ-ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ-ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು. 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ-ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ-ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ-ಗರಿಮೆಗಳನ್ನು ರಾಷ್ಟ್ರೀಯ-ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ವಿಲ್ ಡ್ಯೂರಾಂಟ್ ಅವರ **'ನಾಗರಿಕತೆಯ ಕಥೆ'** ಹಾಗೂ ಜೆ.ಡಿ. ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'**ದಂಥ ಕೃತಿಗಳ ಕನ್ನಡ ಆವೃತ್ತಿಗಳನ್ನು ಹೊರತರುತ್ತಿರುವುದಲ್ಲದೆ,

ಭಾರತೀಯ ವಿದ್ಯಾಭವನ ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದಂಥ ಸಂಸ್ಥೆಗಳ ಸಹಯೋಗದೊಂದಿಗೆ ಮಹತ್ವದ ಕೃತಿಗಳ ಅನುವಾದದ ಯೋಜನೆಗಳನ್ನೂ ಹಮ್ಮಿಕೊಂಡಿದೆ. ಹೀಗೆ ಸಾಹಿತ್ಯಿಕ, ಸಾಂಸ್ಕೃತಿಕ ವೈಜ್ಞಾನಿಕ ಮತ್ತು ತಾಂತ್ರಿಕ ಕಾರ್ಯ ಚಟುವಟಿಕೆಗಳ ಜೊತೆಗೆ ಅನುವಾದಕ್ಕೆ ಸಂಬಂಧಿಸಿದ ವಿವಿಧ ಶಿಕ್ಷಣ ಕ್ರಮಗಳನ್ನೂ ಏರ್ಪಡಿಸಲಾಗಿದೆ. ಅನುವಾದಿತ ಕೃತಿಗಳಿಗೆ ಮತ್ತು ಅನುವಾದ ಕ್ಷೇತ್ರದಲ್ಲಿ ಮಹತ್ತರ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳಿಗೆ ಪುರಸ್ಕಾರ, ಪ್ರಶಸ್ತಿಗಳನ್ನು ನೀಡುವ ಕಾರ್ಯವನ್ನೂ ಮಾಡಲಾಗುತ್ತಿದೆ. ಅನುವಾದ ಕಾರ್ಯಗಳಿಗೆ ಪೂರಕವಾಗುವಂಥ ವಿಚಾರ-ಸಂಕಿರಣಗಳನ್ನೂ, ಕಾರ್ಯಶಿಬಿರಗಳನ್ನೂ ನಡೆಸಿಕೊಂಡು ಬರಲಾಗುತ್ತಿದೆ.

ಕರ್ನಾಟಕ ಸರ್ಕಾರ, ಪ್ರಾಧಿಕಾರಕ್ಕೆ ಹೊಸ ಹೊಸ ಯೋಜನೆಗಳನ್ನೂ ವಹಿಸಿಕೊಡುತ್ತಿದೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಅನುವಾದದ ಪರಿಷ್ಕರಣೆ (ಸಂಪುಟ ೧ ರಿಂದ ೧೪) ಮತ್ತು ಉಳಿದ ಕೃತಿಗಳ (ಸಂಪುಟ ೧೫ ರಿಂದ ೨೨) ಕನ್ನಡ ಅನುವಾದದ ಪ್ರಕಟಣೆ, ಕನಕದಾಸರ ಕೃತಿಗಳ ಅನುವಾದ, ಕಾವೇರಿ ಮತ್ತು ಕೃಷ್ಣ ಜಲವಿವಾದದ ಐತೀರ್ಪುಗಳ ಕನ್ನಡ ಅನುವಾದ, ಜ್ಞಾನಪೀಠ ಮತ್ತು ಇತರ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರ ಆಯ್ದ (ಸಂಚಯ) ಕೃತಿಗಳ ಪ್ರಕಟಣೆ ಮತ್ತು ಅನುವಾದ – ಇವುಗಳನ್ನು ಇಲ್ಲಿ ಮುಖ್ಯವಾಗಿ ಹೆಸರಿಸಬಹುದಾಗಿದೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ-ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರ ವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನದ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ, ಭಾರತೀಯ ವಿದ್ಯಾ ಭವನದ ಬೆಂಗಳೂರು ಶಾಖೆಯ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಈ ಮಾಲೆಯ ಮೊದಲ ೨೫ ಪುಸ್ತಕಗಳನ್ನು ಕಳೆದ ವರ್ಷ ಬಿಡುಗಡೆ ಮಾಡಲಾಯಿತು. ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಹೊರತರಲು



ಸಾಧ್ಯವಾಗಿರುವುದು ಪ್ರಾಧಿಕಾರಕ್ಕೆ ತುಂಬ ಸಂತೋಷವನ್ನು ತಂದಿದೆ. ಕನ್ನಡದ ಸಹೃದಯರಿಗೆ ಇವು ತುಂಬ ಉಪಯುಕ್ತವಾಗುತ್ತದೆಂದು ನಂಬಿದ್ದೇವೆ. ಅನುವಾದ ಕಾರ್ಯದಲ್ಲಿ ನೆರವಾಗಿರುವ ನಾಡಿನ ಹಿರಿ-ಕಿರಿಯ ವಿದ್ವಾಂಸರಿಗೆ, ಸಂಪಾದಕರಾದ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೆ, ಕರಡು ಪರಿಶೀಲನೆಯಲ್ಲಿ ಸಹಕರಿಸಿರುವ ಮಿತ್ರರಿಗೆ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ-ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

**ಪ್ರಧಾನ್ ಗುರುದತ್ತ**
ಅಧ್ಯಕ್ಷ

## ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ, ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಈಗ (ದಿವಂಗತ) ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ವಿಶೇಷವಾಗಿ ಶ್ರೀ ಎಚ್.ಎನ್. ಸುರೇಶ್ ಅವರು ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿ ಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಕಳೆದ ವರ್ಷ ೨೫ ಪುಸ್ತಕಗಳನ್ನು ಹೊರತಂದಿದ್ದಲ್ಲದೆ, ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಪ್ರಕಟಿಸಿ ನಮ್ಮನ್ನು ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

'ಭೂಮಿಯ ಮೇಲೆ ಶಾಂತಿ' ೨೩ನೆಯ ಪೋಪ್ ಜಾನ್ ಪಾಲ್ ಅವರ *Peace on Earth* ಎಂಬ ಕೃತಿಯ ಅನುವಾದ. ಇದನ್ನು ಎ. ಶ್ರೀಲತಾ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

**ಎನ್. ರಾಮಾನುಜ**
ಅಧ್ಯಕ್ಷರು
ವಿದ್ಯಾಭವನ, ಕರ್ನಾಟಕ

**ಎ. ವಿ. ನರಸಿಂಹಮೂರ್ತಿ**
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ



## ಕುಲಪತಿಗಳ ಪ್ರಸ್ತಾವನೆ

ಮುಂಬಯಿಯಲ್ಲಿರುವ ಭಾರತೀಯ ಸಂಸ್ಕೃತಿ ಅಧ್ಯಯನ ಸಂಸ್ಥೆ ಅಂದರೆ, ಭಾರತೀಯ ವಿದ್ಯಾಭವನಕ್ಕೆ ಒಂದು ಬುಕ್ ಯೂನಿವರ್ಸಿಟಿಯ ಅವಶ್ಯಕತೆ ಇತ್ತು. ಇದು ಪ್ರಕಟಿಸಿರುವ ಗ್ರಂಥಗಳನ್ನು ಅಧ್ಯಯನ ಮಾಡಿದರೆ, ಉನ್ನತ ಶಿಕ್ಷಣವನ್ನು ಹೊಂದಿದಂತೆ ಆಗಬೇಕೆನ್ನುವುದೇ ಮುಖ್ಯ ಉದ್ದೇಶ. ಭಾರತೀಯ ಸಂಸ್ಕೃತಿಯ ಆಳವಾದ ಬೇರುಗಳನ್ನು ಜನಗಳಿಗೆ ತಿಳಿಸುವ ಉದ್ದೇಶವೇ ಇದರ ಮುಖ್ಯ ಗುರಿ. ಮೊದಲನೆಯ ಹಂತದಲ್ಲಿ ಒಂದು ನೂರು ಪುಸ್ತಕಗಳನ್ನು ಕೈಗೆತ್ತಿಕೊಂಡು ಅದರಲ್ಲಿಯೂ ೫೦ ಪುಸ್ತಕಗಳನ್ನು ತಕ್ಷಣವೇ ಪ್ರಕಟಿಸುವ ತೀರ್ಮಾನ ತೆಗೆದುಕೊಳ್ಳಲಾಯಿತು. ಪ್ರತಿ ಪುಸ್ತಕವೂ ೨೦೦ರಿಂದ ೨೫೦ ಪುಟಗಳಷ್ಟಿದ್ದು, ಇದರ ಬೆಲೆ ಎರಡು ರೂಪಾಯಿಗಳೆಂದು ನಿರ್ಧರಿಸಲಾಯಿತು.

ಈ ಪುಸ್ತಕಗಳನ್ನು ಇಂಗ್ಲಿಷಿನಲ್ಲಿ ಮಾತ್ರವಲ್ಲದೆ, ಇತರ ಭಾರತೀಯ ಭಾಷೆಗಳಾದ ಹಿಂದಿ, ಬಂಗಾಳಿ, ಗುಜರಾತಿ, ಮರಾಠಿ, ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂಗಳಲ್ಲಿಯೂ ಪ್ರಕಟಿಸುವುದೆಂದು ತೀರ್ಮಾನಿಸಲಾಯಿತು.

ಈ ರೀತಿಯ ೯೦೦ ಪುಸ್ತಕಗಳ ಪ್ರಕಟನೆಗೆ ಸಾಕಷ್ಟು ಧನ ಹಾಗೂ ಅಖಿಲ ಭಾರತ ಸಂಸ್ಥೆಯ ಅವಶ್ಯಕತೆ ಇದೆ. ವಿದ್ಯಾಭವನವು ಇದನ್ನು ಸಫಲಗೊಳಿಸುವಲ್ಲಿ ಸಾಕಷ್ಟು ಶ್ರಮ ವಹಿಸುತ್ತಿದೆ.

ಆಧುನಿಕ ಜ್ಞಾನದಡಿಯಲ್ಲಿ ಹಾಗೂ ನಮ್ಮ ಇಂದಿನ ಅವಶ್ಯಕತೆಗನುಗುಣವಾಗಿ ಭಾರತೀಯ ಸಂಸ್ಕೃತಿಯನ್ನು ಸಮಗ್ರವಾಗಿ ತಿಳಿಸುವುದೇ ಭಾರತೀಯ ವಿದ್ಯಾಭವನದ ಮೂಲ ಗುರಿ. ಇದರಿಂದ ನಮ್ಮ ಸಂಸ್ಕೃತಿಯ ನಿಜವಾದ ಕ್ರಿಯಾಶೀಲ ರೂಪ ಹಾಗೂ ಮೌಲ್ಯಗಳನ್ನು ತಿಳಿಸುವುದು ಸಾಧ್ಯವಾಗುತ್ತದೆ.

ನಮ್ಮ ಗುರಿಯನ್ನು ಇನ್ನೂ ವಿಶದವಾಗಿ ತಿಳಿಸಲು ಯತ್ನಿಸುತ್ತೇನೆ. ಪ್ರತಿಯೊಬ್ಬನಿಗೂ ತನ್ನ ಶಕ್ತಿ ಮತ್ತು ಗುಣಗಳಿಗನುಗುಣವಾಗಿ ತನ್ನ ಘನತೆಗೆ ತಕ್ಕಂತೆ ಸಾಮಾಜಿಕ ಸ್ಥಿತಿಗಳನ್ನು ಕಂಡುಕೊಳ್ಳುವುದನ್ನು ನಾವು ಬಯಸುತ್ತೇವೆ; ವೈಯಕ್ತಿಕ ಪ್ರಯತ್ನ ಹಾಗೂ ಸಾಮಾಜಿಕ ಸಂಬಂಧಗಳನ್ನು ನಮ್ಮ ಮೌಲ್ಯದಡಿಯಲ್ಲಿ ನಿರಂತರವಾಗಿ ಸಾಧಿಸುವುದನ್ನು ನಾವು ಆಶಿಸುತ್ತೇವೆ; ಜೀವನ ಕಲೆಯನ್ನು ನಮ್ಮ ಪರಿಮಿತಿಯನ್ನು ದಾಟಿ ಸಾಧಿಸುವುದರ ಮೂಲಕ ಮಾನವನು ದೈವದ ಸಾಧನವಾಗಿ, ಅವನನ್ನು ಎಲ್ಲರಲ್ಲಿಯೂ ಎಲ್ಲವನ್ನೂ ಅವನಲ್ಲಿಯೂ ಕಾಣುವಂತೆ ಮಾಡುವುದೇ ನಮ್ಮ ಗುರಿ.

ಪ್ರಪಂಚ ನಮ್ಮ ಜೊತೆ ವಿಶೇಷವಾಗಿದೆ. ಪುಸ್ತಕಗಳು ನಮಗೆ ಬೋಧಿಸುವಂತೆ, ಇನ್ಯಾವುದೂ ನಮಗೆ ಸುಂದರ ಹಾಗೂ ಆಕಾಂಕ್ಷೆಯ ಜೀವನವನ್ನು ತೋರಲಾರರು.

ಆದುದರಿಂದ, ಈ ಮಾಲಿಕೆಯಲ್ಲಿ, ಪ್ರಾಚೀನ ಹಾಗೂ ಆಧುನಿಕ ಸಾಹಿತ್ಯವನ್ನು ಪ್ರತಿಬಿಂಬಿಸುವ ಕೃತಿಗಳನ್ನು, ಎಲ್ಲರಿಗೂ ಸುಲಭವಾಗಿ ದೊರಕುವಂತೆ ಪ್ರಕಟಿಸಲು ಉದ್ದೇಶಿಸಲಾಗಿದೆ. ಪ್ರಪಂಚದ ಇತರ ಸಾಹಿತ್ಯಗಳಲ್ಲಿ ನಾವು ಗೌರವಿಸುವ ಮೌಲ್ಯಗಳ ಈ ಗುಣಗಳು ಕಂಡುಬಂದರೆ ಅವುಗಳನ್ನೂ ಇದರಲ್ಲಿ ಸೇರಿಸಿಕೊಳ್ಳಲಾಗುವುದು.

ಈ ರೀತಿಯ ಸಾಹಿತ್ಯ ವಾಹಿನಿಯು ಬೇರೆ ಬೇರೆ ಭಾಷೆಗಳ ಮೂಲಕ ಹರಿದು ಬಂದರೂ, ಅವುಗಳಲ್ಲಿ ಒಂದೇ ಗುರಿ ಮತ್ತು ಆಕಾಂಕ್ಷೆ ಕಾಣಬರುತ್ತದೆ. ಆದುದರಿಂದ ಇದು ಪೌರ್ವಾತ್ಯ ಅಥವಾ ಪಾಶ್ಚಿಮಾತ್ಯ ಓದುಗರಿಗೆ ಭಾರತದ ಆಂತರ್ಯವನ್ನು ತಿಳಿಯುವ ಹಾಗೂ ಪ್ರಪಂಚದ ಚಿಂತನೆಯನ್ನು ತಿಳಿಸುವ ಸಾಧನವಾಗುತ್ತದೆ ಎಂದು ಭಾವಿಸಲಾಗಿದೆ.

ಇದಕ್ಕನುಗುಣವಾಗಿ ಬುಕ್ ಯೂನಿವರ್ಸಿಟಿಯ ಮೊದಲನೆಯ ಪುಸ್ತಕ, ಅತ್ಯಂತ ಶ್ರೇಷ್ಠ ವಿದ್ವಾಂಸರಾದ ಶ್ರೀ ರಾಜಗೋಪಾಲಾಚಾರಿಯವರ 'ಮಹಾಭಾರತ' ಪ್ರಕಟವಾಗಿರುವುದು ನಮ್ಮ ಸುಯೋಗ; ಎರಡನೆಯ ಪುಸ್ತಕ ಇದರ ಒಂದು ಭಾಗವಾದ, ಖ್ಯಾತ ನ್ಯಾಯವಾದಿಗಳೂ ತತ್ವಶಾಸ್ತ್ರವಿದರೂ ಆದ ಎಚ್. ವಿ. ದವೆಯವರಿಂದ ರಚಿತವಾದ ಭಗವದ್ಗೀತೆ. ಇಲ್ಲಿ ಇಲ್ಲದ್ದು ಇನ್ನೆಲ್ಲಿಯೂ ಇರದು ಎಂದು ಮಹಾಭಾರತವನ್ನು ಕುರಿತು ಹೇಳಲಾಗಿತ್ತು. ಇಪ್ಪತ್ತೈದು ಶತಮಾನಗಳಾದ ನಂತರವೂ ನಾವು ಇದೇ ಮಾತನ್ನು ಪುನರುಚ್ಚರಿಸಬಹುದು. ಯಾರಿಗೆ ಮಹಾಭಾರತವು ಗೊತ್ತಿಲ್ಲವೋ, ಅವರಿಗೆ ಆತ್ಮದ ಆಳ ಮತ್ತು ಎತ್ತರ ತಿಳಿದಿಲ್ಲ; ಅಂತಹವರು ಜೀವನದ ಕಷ್ಟ–ಸುಖಗಳಿಂದ ಹಾಗೂ ವೈಭವದಿಂದ ವಂಚಿತರಾಗಿರುತ್ತಾರೆ.

ಮಹಾಭಾರತವು ಕೇವಲ ಒಂದು ಮಹಾಕಾವ್ಯವಲ್ಲ; ವೀರ ರಮಣಿಯರ ಹಾಗೂ ಪುರುಷರ, ಅದರಲ್ಲಿಯೂ ದೈವಾಂಶ ಸಂಭೂತರಾದ ಕೆಲವರ ಮಹಾಗಾಥೆ, ಜೀವನದ ಗುರಿಯನ್ನು ತೋರಿಸುವ ಪೂರ್ಣ ಸಾಹಿತ್ಯವದು; ಸಾಮಾಜಿಕ ಹಾಗೂ ಮೌಲಿಕ ಸಂಬಂಧಗಳ ತಾತ್ವಿಕ ಚಿಂತನೆ; ಅದೊಂದು ಸರಿಸಾಟಿಯಿಲ್ಲದ ಮಾನವನ ಸಮಸ್ಯೆಗಳ ಕುರಿತಾದ ಚಿಂತನೆ; ಇವೆಲ್ಲವುಗಳಿಗಿಂತ ಮಿಗಿಲಾಗಿ ಅದರ ಮುಖ್ಯ ತಿರುಳು ಗೀತೆ. ಇದೊಂದು ಅತ್ಯಂತ ಉದಾತ್ತವಾದ ಪವಿತ್ರಗ್ರಂಥ: ಇದರ ಹನ್ನೊಂದನೆಯ ಅಧ್ಯಾಯದಲ್ಲಿ ಅದ್ಭುತವಾಗಿ ಭವಿಷ್ಯದ ದರ್ಶನವೇ ಆಗುತ್ತದೆ ಎಂಬುದನ್ನು ಇತ್ತೀಚೆಗೆ ವಿಶ್ವದ ಜನ ತಿಳಿಯಲು ಆರಂಭಿಸಿದ್ದಾರೆ.

ಇಂತಹ ಉತ್ತಮ ಪುಸ್ತಕಗಳಿಂದ ಮಾತ್ರ ನಮ್ಮ ನಿಜವಾದ ಸಂಸ್ಕೃತಿಯ ನೆಲೆ ತಿಳಿಯಬರುತ್ತದೆ ಮತ್ತು ನಮ್ಮ ಆಧುನಿಕ ಜೀವನದ ಸಂಘರ್ಷಗಳಿಗೆ ಒಂದು ದಿನ ಸಾಮರಸ್ಯವನ್ನು ಒದಗಿಸುತ್ತದೆ.

ಭವನದ ಈ ಕಾರ್ಯವನ್ನು ಸಫಲಗೊಳಿಸುವಲ್ಲಿ ಸಹಾಯ ಹಸ್ತ ನೀಡಿರುವ ಎಲ್ಲರನ್ನೂ ನಾನು ಮನಸಾರೆ ವಂದಿಸುತ್ತೇನೆ.

**ಕೆ. ಎಂ. ಮುನ್ಷಿ**



## ಪೀಠಿಕೆ

ಪೋಪ್ ಜಾನ್ XXIIIರವರು ತಮ್ಮ ಎಲ್ಲ ಬಿಷಪರಿಗೆ ಬರೆದ *Pacem in Terries* ಎಂಬ ಲೇಖನವನ್ನು ಪ್ರತಿಷ್ಠಿತ ಸಂಸ್ಥೆಯಾದ ಭಾರತೀಯ ವಿದ್ಯಾಭವನ ಒಂದು ರೂಪಾಯಿ ಪುಸ್ತಕ ಮಾಲಿಕೆಯಲ್ಲಿ ಪ್ರಕಟಿಸುತ್ತಿದೆ. ಈ ಪುಸ್ತಕಕ್ಕೆ ಮುನ್ನುಡಿಯನ್ನು ಬರೆಯುವುದಕ್ಕೆ ನನಗೆ ವಿಶೇಷ ಹರ್ಷವಾಗುತ್ತಿದೆ. ಇವು ಚಿಕ್ಕ ಚಿಕ್ಕ ಪುಸ್ತಕಗಳಾಗಿದ್ದು, ಜಗತ್ಪ್ರಸಿದ್ಧಿಯನ್ನು ಪಡೆದಿವೆ.

ವಿಶ್ವದಲ್ಲಿ ಶಾಂತಿ ಸ್ಥಾಪನೆಗಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟ ಪೋಪ್ ಜಾನ್ XXIII ಅವರು ಎಲ್ಲರ ಹೃದಯದಲ್ಲಿ ನೆಲೆಸಿದ್ದಾರೆ. ಈ ಲೇಖನ ಕೇವಲ ಕ್ಯಾಥೋಲಿಕ್ ಕ್ರಿಶ್ಚಿಯನ್ನರಿಗಷ್ಟೇ ಸೀಮಿತವಲ್ಲ. ಇಡೀ ವಿಶ್ವದಲ್ಲಿ ಶಾಂತಿಗಾಗಿ ಐಕ್ಯತೆಯನ್ನು ಸಾಧಿಸುವಲ್ಲಿ ಮತ್ತು ವಿಶ್ವಸಂಸ್ಥೆಯ ಸಂಸ್ಥಾಪನೆಯ ಸಂದರ್ಭದಲ್ಲಿ ಇವರ ವಿಚಾರಗಳನ್ನು ಆಧಾರವನ್ನಾಗಿ ಅನುಮೋದಿಸಿದ್ದಾರೆ. ಇದಕ್ಕಾಗಿ ಪೂಜ್ಯ ಕಾರ್ಡಿನಲ್ ಸುಯೆನೆನ್ಸ್ ಅವರನ್ನು ಪೋಪರು ವಿಶ್ವಸಂಸ್ಥೆಗೆ ಕಳುಹಿಸಿದ್ದರು.

ಪೋಪ್ ಜಾನ್‌ರವರ 'ಭೂಮಿಯಲ್ಲಿ ಶಾಂತಿಯ ನೆಲೆ' ಎಂಬ ಕೃತಿಯು ಮುಖ್ಯವಾಗಿ ನಾಲ್ಕು ಭಾಗಗಳಾಗಿ ವಿಂಗಡಿಸಲ್ಪಟ್ಟಿದೆ. ಅವೇ ಜನತೆ ಮತ್ತು ಸರಕಾರಕ್ಕೆ ಮೂಲ ಸಂದೇಶಗಳು. ಮಾನವೀಯ ಸಂಬಂಧಗಳು, ರಾಜ್ಯ ರಾಜ್ಯಗಳ ಸಂಬಂಧ ಮತ್ತು ರಾಜ್ಯ ಮತ್ತು ವಿಶ್ವ ಸಂಘಟನೆ. ಕ್ಯಾಥೊಲಿಕ್ ಚರ್ಚಿನ ಮುಖ್ಯಸ್ಥರಾದ ಪಾಂಟಿಫ್‌ರವರು ಕ್ಯಾಥೊಲಿಕ್ ಕ್ರೈಸ್ತರು ಮತ್ತು ಕ್ಯಾಥೊಲಿಕ್ ಅಲ್ಲದವರ ಸಹಯೋಗದೊಡನೆ ಎಲ್ಲ ದೇಶಗಳ ಜನತೆಯ ನಡುವೆ ಶಾಂತಿ ಸ್ಥಾಪನೆಗಾಗಿ ಕರೆ ನೀಡಿದ್ದಾರೆ. ಪೋಪರ ಈ ಲೇಖನವು ಸತ್ಯ, ನ್ಯಾಯ, ಅನುಕಂಪ ಮತ್ತು ಸ್ವಾತಂತ್ರ್ಯ ಈ ನಾಲ್ಕು ತತ್ವಗಳ ಆಧಾರದ ಮೇಲೆ ರಚನೆಗೊಂಡು ವಿಶ್ವದಲ್ಲಿ ಶಾಂತಿಸ್ಥಾಪನೆಗೆ ಒತ್ತು ಕೊಟ್ಟಿದೆ.

ಐತಿಹಾಸಿಕ ಹಿನ್ನೆಲೆಯುಳ್ಳ ಈ ಪ್ರಸಿದ್ಧ ಕೃತಿಯನ್ನು ಮುದ್ರಿಸಿ ಜನಸಾಮಾನ್ಯರಿಗೆ ಸುಲಭವಾಗಿ ಕೈಗೆಟುಕುವಂತಹ ಉತ್ತಮ ಕಾಯಕವನ್ನು ಕೈಗೊಂಡ ಭಾರತೀಯ ವಿದ್ಯಾಭವನಕ್ಕೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಇಂತಹ ಅಮೂಲ್ಯ ರಚನೆಗಳು ಸಫಲಗೊಂಡು ಶಾಂತಿ ಮತ್ತು ನೆಮ್ಮದಿ ಜಗತ್ತಿನೆಲ್ಲೆಡೆ ಪಸರಿಸಲಿ ಎಂದು ತುಂಬು ಹೃದಯದಿಂದ ಹಾರೈಸುತ್ತೇನೆ.

ಆರ್ಚ್ ಬಿಷಪರ ಭವನ
ಬೊಂಬಾಯಿ, ೧೫–೨–೧೯೬೪

**ವಲೇರಿಯನ್ ಕಾರ್ಡಿನಲ್ ಗ್ರೇಸಿಯಸ್**
ಬೊಂಬಾಯಿನ ಆರ್ಚ್ ಬಿಷಪ್

Blank



## ಪರಿವಿಡಿ


ಮುನ್ನುಡಿ v
ಸಂದೇಶ vii
ಹಾರೈಕೆ viii
ಪ್ರಾಸ್ತಾವಿಕ ನುಡಿ ix
ಪೀಠಿಕೆ xi
ಅರಿಕೆ xiv
ಕುಲಪತಿಗಳ ಪ್ರಸ್ತಾವನೆ xv
ಪೀಠಿಕೆ xvii

೧. ಮಾನವರ ಮಧ್ಯೆ ಸುವ್ಯವಸ್ಥೆ ೧
೨. ವ್ಯಕ್ತಿಗಳು ಮತ್ತು ಸಾರ್ವಜನಿಕ ಪ್ರಾಧಿಕಾರಗಳು ೯
೩. ರಾಜ್ಯಗಳ ನಡುವಿನ ಸಂಬಂಧಗಳು ೧೬
೪. ರಾಜಕೀಯ ಸಂಘಟನೆಗಳು ಮತ್ತು ವಿಶ್ವ ಸಂಘಟನೆ ೨೪
೫. ಸೃಜನಶೀಲತೆ ಮತ್ತು ಸಮಾಜಸೇವೆಗಾಗಿ ಪ್ರಾದೇಶಿಕ ಅಭಿವೃದ್ಧಿಗೆ ಪೂರಕ ಯೋಜನೆ ೨೮

# ಭೂಮಿಯ ಮೇಲೆ ಶಾಂತಿ

Blank

# ೧. ಮಾನವರ ಮಧ್ಯೆ ಸುವ್ಯವಸ್ಥೆ

ಭೂಮಿಯಲ್ಲಿ ಶಾಂತಿ ನೆಲೆಸಬೇಕೆಂದು ಪ್ರತಿಯೊಂದು ಯುಗದ ಜನಗಳೂ ಆಸೆ ಪಡುತ್ತಿದ್ದಾರೆ. ಇದು ಆಗಬೇಕಾದರೆ ದೇವರು ಹಾಕಿಕೊಟ್ಟಿರುವ ಕ್ರಮ ಜೀವನವನ್ನು ಎಲ್ಲರೂ ನಡೆಸಬೇಕು. ಜ್ಞಾನದ ಬೆಳವಣಿಗೆ ಹಾಗೂ ವಿಜ್ಞಾನದ ಆವಿಷ್ಕಾರಗಳನ್ನು ಗಮನಿಸಿದರೆ, ಜೀವವಿರುವ ಎಲ್ಲದರಲ್ಲಿಯೂ ಹಾಗೂ ಪ್ರಕೃತಿಯಲ್ಲಿಯೂ ಒಂದು ರೀತಿಯ ಆಶ್ಚರ್ಯಕರ ಕ್ರಮ ಕಂಡುಬರುತ್ತದೆ. ಮಾನವನು ಈ ಎಲ್ಲವನ್ನೂ ತನ್ನ ಸರಿಯಾದ ಬುದ್ಧಿಶಕ್ತಿಯಿಂದ ಉಪಯೋಗಿಸಿ, ಅವುಗಳನ್ನು ತನಗೆ ಅನುಕೂಲವಾಗುವಂತೆ ಮಾಡುವುದೇ ಅವನ ಶ್ರೇಷ್ಠತೆ.

ಇತ್ತೀಚೆಗೆ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಈ ಅಭಿವೃದ್ಧಿಯೆಲ್ಲವೂ ಮಾನವ ಶಕ್ತಿಯಿಂದ ಆಗಿದ್ದರೆ, ಈ ಶಕ್ತಿಯುತ ಮಾನವನನ್ನು ಸೃಷ್ಟಿಸಿ, ಅಪಾರ ಜ್ಞಾನವನ್ನು ಕೊಟ್ಟವನು ಜಗನ್ನಿಯಾಮಕನಾದ ದೇವರು. ಅದಕ್ಕೇ ಸ್ತೋತ್ರಗಳನ್ನು ರಚಿಸುವವ ಈ ರೀತಿ ದೇವರನ್ನು ಸ್ತುತಿಸುತ್ತಾನೆ. "ಓ ದೇವರೇ, ನನ್ನ ಒಡೆಯ, ನಿನ್ನ ಪ್ರಭುತ್ವ ಇಡೀ ವಿಶ್ವವನ್ನಾವರಿಸಿದೆ. ನೀನು ಬಗೆ ಬಗೆಯ ಜೀವಿಗಳನ್ನು ಸೃಷ್ಟಿಸಿರುವೆ, ಸಲಹುತ್ತಿರುವೆ. ಅದರಲ್ಲೂ ಮಾನವನನ್ನು ಸೃಷ್ಟಿಸಿ ಅವನಿಗೆ ಹೇರಳವಾದ ಜ್ಞಾನವನ್ನು ಕೊಟ್ಟು, ದೇವದೂತರ ನಂತರದ ಪವಿತ್ರ ಸ್ಥಾನವನ್ನು ನೀಡಿರುವೆ. ಅವನನ್ನು ಅತ್ಯಂತ ಉನ್ನತ ಸ್ಥಾನದಲ್ಲಿಟ್ಟಿರುವ ನೀನೆಷ್ಟೊಂದು ದಯಾಮಯಿಯಾಗಿರುವೆ?" ಎಂದು ಪವಿತ್ರ ಗೀತೆಯನ್ನು ರಚಿಸಿ ಪ್ರಾರ್ಥಿಸುತ್ತಾನೆ.

ಜಗತ್ತಿನಲ್ಲಿ ಮನುಷ್ಯರ ನಡುವೆ ಇರುವ ಗದ್ದಲ, ಅಶಾಂತಿ, ವಿಭಿನ್ನ ನಡತೆಗಳು ಭೇದ-ತಾರತಮ್ಯಗಳು ಎಷ್ಟೇ ಇದ್ದರೂ ಎಲ್ಲರೂ ಸಹಬಾಳ್ವೆ ನಡೆಸಿ ಶಾಂತಿಯಿಂದ ಜೀವನ ಮಾಡಿ ಒಬ್ಬರಿಗೊಬ್ಬರು ಹೊಂದಿಕೊಳ್ಳಬೇಕಾದ ಸ್ಥಿತಿಯನ್ನೊದಗಿಸಿದ ಶಕ್ತಿಯೇ ದೇವರು. ಮಾನವನ ಅಂತರಾತ್ಮದಲ್ಲಿರುವ ಒಳ್ಳೆಯ ಗುಣಗಳೇ ಇದಕ್ಕೆ ಸಾಕ್ಷಿಯಾಗಿವೆ. ಆ ದೇವರು ಮುಂದೆ ಬಂದು ಅವನ ದೂತರ ಮೂಲಕ ಸಂದೇಶ ಮತ್ತು ಜ್ಞಾನವನ್ನು ಕರುಣಿಸಿ, ಒಳ್ಳೆಯ ಸಮಾಜವನ್ನು ನಿರ್ಮಿಸುತ್ತಾನೆ ಮತ್ತು ಸಮಗ್ರ ಮಾನವತೆಗೆ ನಾಂದಿ ಹಾಡುತ್ತಾನೆ. ಮನುಷ್ಯರ ಬುದ್ಧಿ ಮತ್ತು ಹೃದಯಗಳಲ್ಲಿ ಅಸಮಾನತೆ ಇದ್ದರೂ ಆತ್ಮದಲ್ಲಿ ಸಮಾನತೆ ಇದೆ. ಇದೇ ದೇವರು ಬಿತ್ತಿದ

ಶಾಂತಿಯ ಬೀಜ. ಆದರೆ ಕೆಲವು ಚಂಚಲತೆಯಿಂದ ಕೂಡಿದ ಅಸ್ಥಿರ ಅಭಿಪ್ರಾಯಗಳಿಂದಾಗಿ ಅಸಂಬದ್ಧ ಹೇಳಿಕೆಗಳು ಸಾರ್ವತ್ರಿಕ ವ್ಯವಸ್ಥೆಗೆ ಧಕ್ಕೆಯನ್ನುಂಟು ಮಾಡಿವೆ. ಜನರಲ್ಲಿ ಮೂಲವಿಚಾರಗಳ ವಾಸ್ತವಿಕ ಚಿಂತನೆಗೆ ಅಡ್ಡಿಯನ್ನುಂಟು ಮಾಡುವ ಇಂತಹ ಸಂದರ್ಭದಲ್ಲಿ ದೇವದೂತರು ಪಾದ್ರಿಗಳ ರೂಪದಲ್ಲಿ ಜನರನ್ನು ತಿದ್ದುವ ಕೈಂಕರ್ಯ ಕೈಗೊಳ್ಳುತ್ತಾರೆ ಮತ್ತು ಎಲ್ಲ ಜೀವರಾಶಿಗಳನ್ನು ಅಪಾಯದಿಂದ ಪಾರು ಮಾಡುತ್ತಾರೆ. ಇದಕ್ಕೆ ಪೂರಕವಾಗುವಂತೆ ಆಯಾ ಸರ್ಕಾರಗಳು ಸಾರ್ವಜನಿಕ ಕಟ್ಟಲೆಗಳು ಮಾನವೀಯತೆಯ ಸಂಬಂಧವನ್ನು ಬೆಸೆದು ಸಕಲರೂ ನೆಮ್ಮದಿಯಿಂದ ಬಾಳುವಂತೆ ಸಹಕರಿಸುವುದು ಅವಶ್ಯಕವಾಗಿದೆ.

ಸಮಾಜದಲ್ಲಿ ಮಾನವನ ಸುಖಕ್ಕಾಗಿ ಕೆಲವು ನಿಯಮಗಳನ್ನು ಹೇರಬೇಕಾಗುತ್ತದೆ. ಅದು ಸರ್ವರ ಅಭ್ಯುದಯಕ್ಕೆ ಪೂರಕವಾಗಿರಬೇಕು. ಪ್ರತಿಯೊಬ್ಬ ಮನುಷ್ಯನು ಸಹಜವಾಗಿ ಬುದ್ಧಿವಂತ ಮತ್ತು ಮುಕ್ತ ಮನಸ್ಸಿನವನಾಗಿರುತ್ತಾನೆ. ಅವನು ಸದ್ಗುಣಿಯಾಗಿದ್ದರೂ ಕೆಲವೊಮ್ಮೆ ಸ್ವಾರ್ಥಿಯಾಗಿ ಇನ್ನೊಬ್ಬರಿಗೆ ಹಿಂಸೆ ಕೊಟ್ಟು ಶೋಷಣೆಗೆ ಗುರಿಪಡಿಸುವ ಸಂದರ್ಭಗಳುಂಟಾಗಬಹುದು. ಇವೂ ಮಾನವನ ಸಹಜ ಗುಣಗಳಾಗಿರುವುದರಿಂದ ಸುವ್ಯವಸ್ಥಿತ ಸಮಾಜಕ್ಕೆ ಕಾನೂನು ಅನಿವಾರ್ಯವಾಗಿದೆ. ಈ ಜಗತ್ತಿನಲ್ಲಿ ಎಲ್ಲರೂ ಏಸುಕ್ರಿಸ್ತನ ಮಕ್ಕಳು. ಎಲ್ಲರೂ ದೇವರಿಗೆ ಪ್ರೀತಿಪಾತ್ರರಾಗಿದ್ದಾರೆ. ಅವರು ಜೀವನ ಪರ್ಯಂತ ದೇವರ ದಯೆಯಿಂದ ಸುಖವಾಗಿರುತ್ತಾರೆ.

**ಜೀವಿಸುವ ಹಕ್ಕು**

ಪ್ರತಿಯೊಬ್ಬ ಮನವನಿಗೂ ಜೀವಿಸುವ ಹಕ್ಕುಂಟು. ಆದ ಕಾರಣ ತನ್ನ ಊಟಕ್ಕೆ ಅಗತ್ಯವಿದ್ದಷ್ಟು ಆಹಾರ, ಉಡಲು ಬಟ್ಟೆ ಇರಲು ಅಥವಾ ವಾಸಿಸಲು ವಸತಿ ಮುಂತಾದವುಗಳನ್ನು ಪಡೆಯುವ ಹಕ್ಕಿರುತ್ತದೆ. ವೈದ್ಯಕೀಯ ಸೇವೆ, ಶಿಕ್ಷಣ, ಸಾಮಾಜಿಕ ಭದ್ರತಾ ಸೌಲಭ್ಯಗಳು ವಿಧವೆಯರಿದ್ದಲ್ಲಿ ಅವರಿಗೆ ಆರ್ಥಿಕ ಸೌಲಭ್ಯಗಳು ದೊರೆತು ಸಮಾಜದಲ್ಲಿ ಎಲ್ಲ ವರ್ಗದ ಜನರ ಜೀವನಕ್ಕೆ ಅಡ್ಡಿ ಬರದಂತಿರಬೇಕು.

**ನೀತಿಯುಕ್ತ ಸಾಂಸ್ಕೃತಿಕ ಮೌಲ್ಯಗಳು**

ಸಮಾಜದಲ್ಲಿ ಸಾಮಾನ್ಯವಾಗಿ ಒಬ್ಬರನ್ನೊಬ್ಬರು ಗೌರವಿಸುತ್ತಾರೆ. ಕಾಯಕದಲ್ಲಿ ಶುದ್ಧತೆಯಿಂದ ಪರಿಪೂರ್ಣ ಪಕ್ವತೆಯ ಗುರಿಗೆ ಅನ್ವೇಷಣಾಯುಕ್ತ ಸಾಧಕರು ಶ್ರಮವಹಿಸಿ ಮುನ್ನಡೆದು ಸಾಗಲು ಪ್ರಯತ್ನಿಸುತ್ತಾರೆ. ಸರ್ವರ ಹಿತಕ್ಕಾಗಿ ಶ್ರಮಿಸುವವರು ಎಲ್ಲರ ವಿಶ್ವಾಸವನ್ನು ಪಡೆದು ಸಮಾಜದಲ್ಲಿ ಮನ್ನಣೆಯನ್ನು ಪಡೆಯುತ್ತಾರೆ. ಶರೀರ, ಮನಸ್ಸು ಹಾಗೂ ಆತ್ಮಗಳ ತೃಪ್ತಿಗಾಗಿ ಅವಿರತ ಪ್ರಯತ್ನಗಳ ಮೂಲಕ



ಸರ್ವತೋಮುಖ ಅಭಿವೃದ್ಧಿಯಾದಾಗ ಉನ್ನತ ಸಂಸ್ಕೃತಿಗೆ ಎಡೆಮಾಡಿಕೊಡುತ್ತದೆ ಮತ್ತು ಜೀವನ ಪ್ರೇರಕ ವಿದ್ಯೆಯು ಮಾನವ ಕೋಟಿಯ ಬೆಳವಣಿಗೆಗೆ ಪ್ರೇರಕವಾಗುತ್ತದೆ ಮತ್ತು ನೀತಿವಂತ ಮಾನವನನ್ನು ರೂಪಿಸುತ್ತದೆ.

**ಆರಾಧಿಸುವ ಹಕ್ಕು**

ಪ್ರತಿಯೊಬ್ಬ ಮನುಷ್ಯನು ಗೌಪ್ಯವಾಗಿ ಅಥವಾ ಬಹಿರಂಗವಾಗಿ ದೇವರನ್ನು ಆರಾಧಿಸುತ್ತಾನೆ. ಲಾಕ್ವಾಂಟಿಯಸ್ ಅವರ ಪ್ರಕಾರ "ನಾವು ಜೀವರಿಗೆ ಕೃತಜ್ಞತೆಯ ಬದ್ಧತೆಯಿಂದಿರಲು ಜಗನ್ನಿಯಾಮಕನು ಒಬ್ಬನೇ ಎಂದು ಖಚಿತಪಡಿಸಿಕೊಂಡು ತನ್ನ ಚೈತನ್ಯಕ್ಕನುಗುಣವಾಗಿ ಧರ್ಮವನ್ನು ಆಧಾರವಾಗಿಟ್ಟುಕೊಂಡು ಆಧ್ಯಾತ್ಮಿಕ ಮುಕ್ತಿಯನ್ನು ಪಡೆಯುತ್ತೇವೆ." ಲಿಯೋ VIII ರವರು ಹೀಗೆ ಘೋಷಿಸುತ್ತಾರೆ. "ನಾವೆಲ್ಲರೂ ದೇವರ ಮಕ್ಕಳು; ದೇವರ ಪ್ರಾರ್ಥನೆಯು ಹಿಂಸೆ ಮತ್ತು ಅನ್ಯಾಯವನ್ನು ಹೊಡೆದೋಡಿಸುತ್ತದೆ. ನಾವೆಲ್ಲರೂ ಜೀವ ಸ್ವರೂಪವಾದ ದೇವರ ಮಂದಿರ ವಾಗಿದ್ದೇವೆ. ಅದನ್ನೇ ಚರ್ಚಿನಲ್ಲಿ ಕಲಿಸುತ್ತೇವೆ. ಆ ದೇವರನ್ನು ಆರಾಧಿಸುವ ಸ್ವಾತಂತ್ರ್ಯವನ್ನು ಪಡೆದಿದ್ದೇವೆ. ಶರೀರಾತ್ಮಗಳ ಕಲ್ಮಶಗಳನ್ನು ತೊಲಗಿಸಿ ಪವಿತ್ರಾತ್ಮವನ್ನು ಸಿದ್ಧಿಗೆ ತರುವ ಮಹತ್ಕಾರ್ಯಕ್ಕೆ ದೃಢತೆ ಮತ್ತು ಸ್ಥೈರ್ಯದಿಂದ ಎಷ್ಟೋ ಜನರು ತಮ್ಮ ರಕ್ತವನ್ನು ಕೊಟ್ಟು ಜೀವವನ್ನು ಬಲಿದಾನ ಮಾಡಿ ಹುತಾತ್ಮರಾಗಿದ್ದಾರೆ."

**ಜೀವನ ಶೈಲಿ**

ಜನರು ಅವರದ್ದೇ ಆದಂತಹ ಜೀವನ ಶೈಲಿಯನ್ನು ಹೊಂದಲು ಬಯಸುತ್ತಾರೆ. ಪ್ರತಿ ವ್ಯಕ್ತಿಗೂ ಮದುವೆಯ ನೆಲೆಗಟ್ಟಿನಲ್ಲಿ ತನ್ನದೇ ಆದ ಕುಟುಂಬವಿರುತ್ತದೆ. ಸಂಸಾರ ನಿರ್ವಹಣೆಯು ಪುರುಷರ ಹಾಗೂ ಮಹಿಳೆಯರ ಕರ್ತವ್ಯ. ಪ್ರೀತಿ, ಮೈತ್ರಿಗಳೊಡನೆ ಸುಖವನ್ನು ಪಡೆಯುವ ಹಕ್ಕು ಹಾಗೂ ಆರ್ಥಿಕ, ಸಾಮಾಜಿಕ ಮತ್ತು ನೀತಿಯುಕ್ತ ಜೀವನ ನಡೆಸುತ್ತಾನೆ.

**ಆರ್ಥಿಕ ಹಕ್ಕು**

ಆರ್ಥಿಕ ಕ್ಷೇತ್ರದಲ್ಲಿ ಪಾಲ್ಗೊಳ್ಳುವಿಕೆ ಮನುಷ್ಯನಿಗೆ ಅನಿವಾರ್ಯವಾಗಿರುತ್ತದೆ. ದೈನ್ಯದಿಂದ ಜೀವನವನ್ನು ಸಾಗಿಸಲು ಕೆಲಸ ಮಾಡಲೇಬೇಕು. ಪ್ರತಿಯೊಬ್ಬನ ಕೆಲಸದ ದಕ್ಷತೆ ಅಥವಾ ಸಾಮರ್ಥ್ಯ ಅವನ ಆರೋಗ್ಯ, ಕೆಲಸ ಮಾಡುವ ಕುಶಲತೆ ಮತ್ತು ಕೆಲಸ ಮಾಡುವಲ್ಲಿಯ ವಾತಾವರಣ ಮತ್ತು ಸೌಲಭ್ಯಗಳನ್ನು ಅವಲಂಬಿಸಿದೆ. ಮಹಿಳೆಯರೂ ಕೂಡ ಕೆಲಸ ಮಾಡುವ ಹಕ್ಕನ್ನು ಪಡೆದಿರುತ್ತಾರೆ. ಮನೆ ಮತ್ತು

ಸಂಸಾರಗಳನ್ನು ತೂಗಿಸಿಕೊಂಡು ಕೆಲಸಕ್ಕೂ ಹೋಗಿ ಕುಟುಂಬದ ಆರ್ಥಿಕ ಹೊರೆಯನ್ನು ಕಡಿಮೆ ಮಾಡುತ್ತಾರೆ.

ಪ್ರತಿಯೊಬ್ಬನೂ ತನ್ನ ಸಾಮರ್ಥ್ಯಕ್ಕನುಸಾರವಾಗಿ ಇರತಕ್ಕಂತಹ ಸಂಪನ್ಮೂಲಗಳನ್ನು ಉತ್ಪಾದನೆಯಲ್ಲಿ ಬಳಸಿಕೊಂಡು ಆರ್ಥಿಕಾಭಿವೃದ್ಧಿಯನ್ನು ಸಾಧಿಸಿ ಉನ್ನತ ಜೀವನಮಟ್ಟವನ್ನು ಪಡೆಯಲು ಹವಣಿಸುತ್ತಾನೆ. ಪಾದ್ರಿ ಪಿಯಸ್ XII ಅವರು ಹೇಳುವಂತೆ ಪ್ರತಿಯೊಬ್ಬನೂ ತನಗೆ ಅಗತ್ಯವಾದ ಬೇಕು ಬೇಡಗಳನ್ನು ಅಂದರೆ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಪ್ರಕೃತಿಯು ಹೇರಳವಾದ ಸಂಪನ್ಮೂಲಗಳನ್ನು ಕರುಣಿಸಿದೆ. ಹೀಗಾಗಿ ಪ್ರಕೃತಿದತ್ತ ಕೊಡುಗೆ ಕಸುಬುಗಾರಿಕೆಯನ್ನು ಪರಿಣತಿಯಿಂದ ಉಪಯೋಗಿಸಿಕೊಳ್ಳಬೇಕು. ತನ್ನ ಕುಟುಂಬದವರೆಲ್ಲರೂ ಆರ್ಥಿಕ ಸಮೃದ್ಧಿಯಿಂದಾಗಿ ಸುಖ-ಶಾಂತಿಯಿಂದ ಜೀವಿಸಲು ಸ್ವಂತ ಆಸ್ತಿಯ ಹಕ್ಕನ್ನು ಅವನು ಪಡೆದಿರುತ್ತಾನೆ. ಅದು ಎಲ್ಲರ ಒಳಿತನ್ನು ಹೆಚ್ಚಿಸುವುದರ ಜೊತೆಗೆ ಎಲ್ಲರ ಹಸನಾದ ಬಾಳ್ವೆಗೆ ಪೂರಕವಾಗಿರಬೇಕು ಮತ್ತು ದೇಶದ ಆರ್ಥಿಕ ಪ್ರಗತಿಗೆ ಸಹಕಾರಿಯಾಗಿರಬೇಕು.

**ಸಭೆ ಮತ್ತು ಸಂಘ**

ಮಾನವ ಸಂಘಜೀವಿ. ಸಮಾಜದ ಸಹಕಾರವಿಲ್ಲದೆ ಅವನು ಬದುಕಲಾರ. ಹಾಗಾಗಿ ಸಮಗ್ರ ಜನತೆಯ ಒಳಿತಿಗಾಗಿ ಅವನು ಆಗಾಗ ಸಭೆ ಸೇರಿಸಿ ಸಮಾಜದ ಬೇಕು ಬೇಡಗಳ ಬಗ್ಗೆ ವಿಮರ್ಶಿಸಿ ನಿರ್ಧಾರ ಕೈಗೊಳ್ಳುತ್ತಾನೆ.

**ವಲಸೆ ಹೋಗುವ ಹಕ್ಕು**

ವ್ಯಕ್ತಿಯು ಸಹಜವಾಗಿ ತನ್ನ ದೇಶದಲ್ಲಿ ಸ್ವತಂತ್ರವಾಗಿ ಬದುಕುವ ಹಕ್ಕನ್ನು ಪಡೆದಿರುತ್ತಾನಾದರೂ ಅವನು ಕೆಲವೊಮ್ಮೆ ಅನಿವಾರ್ಯ ಕಾರಣಗಳಿಂದಾಗಿ ಸ್ವದೇಶ ಬಿಟ್ಟು ಬೇರೆ ದೇಶದಲ್ಲಿ ನೆಲೆಸುವುದಕ್ಕಾಗಿ ವಲಸೆ ಹೋಗುವ ಹಕ್ಕನ್ನು ಹೊಂದಬಹುದು. ಯಾಕೆಂದರೆ ಅವನು ಯಾವ ದೇಶದವನೇ ಆದರೂ ಮಾನವ ಕುಲದಿಂದ ಹೊರತಾದವರಲ್ಲ. ಎಲ್ಲರೂ ಜಗನ್ನಿಯಾಮಕನ ಮಕ್ಕಳು. ಹಾಗಾಗಿ ಅವನು ಇಡೀ ಜಗತ್ತಿನ ಪ್ರಜೆಯಾಗಿರುತ್ತಾನೆ.

**ರಾಜಕೀಯ ಹಕ್ಕು**

ರಾಜಕೀಯ ಸ್ವಾತಂತ್ರ್ಯವನ್ನು ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯಾಗದಂತೆ ಸಮಾಜದ ಪ್ರಗತಿಯ ಅವಶ್ಯಕತೆಗಳಿಗೆ ತಕ್ಕಂತೆ ತನ್ನ ವೈಯಕ್ತಿಕತೆಯನ್ನು ಸರಿಹೊಂದಿಸಿಕೊಂಡು, ಸಾರ್ವತ್ರಿಕ ಸಭೆ ಸೇರಿಸಿ, ಸಮಾಜ ಕಲ್ಯಾಣಕ್ಕಾಗಿ ಶ್ರಮಿಸಿ, ಸಾಮಾಜಿಕ ಭದ್ರತೆಯನ್ನು



ಸಾಧಿಸಬೇಕು. ರಾಜಕೀಯ ಕ್ಷೇತ್ರದಲ್ಲಿ ಮಾನವನ ಅಂತಿಮಗುರಿ ಮಾನವ ಕುಲದ ಶಾಶ್ವತ ಅಥವಾ ನಿರಂತರ ಸುಖವನ್ನು ಪಡೆಯುವುದೇ ಆಗಿರುತ್ತದೆ. ಹಾಗಾಗಿ ಅವನು ತನ್ನ ವಿವೇಚನೆಯಿಂದ ಸರಿಯಾದ ಮಾರ್ಗದಲ್ಲಿ ರಾಜ್ಯವನ್ನು ನಡೆಸಬೇಕು. ಯಾಕೆಂದರೆ, ಮಾನವನ ವಿಚಾರ ಕಲ್ಪನೆಗೂ ಮೀರಿದ್ದು. ಆದ್ದರಿಂದ ಅವನು ಉನ್ನತ, ಮೌಲಿಕ ವಿಚಾರಗಳನ್ನು ರಾಜಕೀಯ ಕ್ಷೇತ್ರದಲ್ಲಿ ಬಳಸಿ ಜಗತ್ತಿನಲ್ಲಿ ಶಾಂತಿ ನೆಲೆಸುವಂತೆ ನೋಡಿಕೊಳ್ಳಬೇಕು.

**ಕರ್ತವ್ಯಗಳು**

ಪ್ರಾಕೃತಿಕ ಜಗತ್ತಿನಲ್ಲಿ ಪ್ರತಿಯೊಬ್ಬರೂ ಮಾನವೀಯತೆಯ ಇತಿಮಿತಿಯಲ್ಲಿ ಸೌಹಾರ್ದದಿಂದಿದ್ದು, ಶಿಸ್ತಿನ ಜೀವನ ನಡೆಸಬೇಕು. ಪರರಿಗೆ ಹಿಂಸೆ ಸಲ್ಲದು; ಸತ್ಯ ಮತ್ತು ಅಹಿಂಸೆ ನಿಯಮಗಳನ್ನು ಪಾಲಿಸಿದಾಗ ಮಾತ್ರ ಸರ್ವತೋಮುಖ ವಿಕಾಸವಾದೀತು ಮತ್ತು ತನ್ನ ಆತ್ಮಶಕ್ತಿಯ ಬಲದಿಂದ ಇತರರ ದಾಳಿಯಿಂದ ತಪ್ಪಿಸಿಕೊಳ್ಳಬಹುದು.

**ಪಾರಸ್ಪರಿಕ ಹಕ್ಕುಗಳು ಮತ್ತು ಪರಸ್ಪರ ಬಾಧ್ಯತೆಗಳು**

ಜಗತ್ತಿನಲ್ಲಿರುವ ಎಲ್ಲ ಜನರೂ, ಸಮಾನ ಹಕ್ಕು ಮತ್ತು ಬಾಧ್ಯತೆಗಳನ್ನು ಹೊಂದಿಸಿಕೊಂಡೇ ಜನಿಸಿರುತ್ತಾರೆ. ಎಲ್ಲರಿಗೂ ವಿಚಾರಶಕ್ತಿ ಮತ್ತು ಅಂತರಂಗ ಪ್ರಜ್ಞೆ ಇರುವುದರಿಂದ ಪರಸ್ಪರ ಅನ್ಯೋನ್ಯತೆಯಿಂದ ಜೀವಿಸಬೇಕು. ಇದೇ ಸಮಾಜ ಧರ್ಮ, ಇದೇ ಸಮಾನತ್ವದ ನೀತಿಯಾಗಿರುತ್ತದೆ. ಎಲ್ಲ ಗ್ರಂಥಗಳೂ ಇದನ್ನೇ ಸಾರುತ್ತವೆ. ಆದ್ದರಿಂದ ನೀತಿಯುಕ್ತ ಸಮಾಜವನ್ನು ನಿರ್ಮಿಸುವ ಹಕ್ಕು ಕೂಡಾ ಮಾನವನ ಕರ್ತವ್ಯವಾಗಿರುತ್ತದೆ. ನೀತಿಯ ಆಧಾರ ತಪ್ಪಿದಲ್ಲಿ ಮಾನವೀಯತೆ ಮಣ್ಣು ಪಾಲಾಗುತ್ತದೆ.

**ಪರಸ್ಪರ ಸಹಕಾರ**

ಮಾನವ ಸಂಘಜೀವಿಯಾಗಿರುವುದರಿಂದ ಎಲ್ಲ ಜನರು ಸಾಮೂಹಿಕವಾಗಿ ಸಮರ್ಪಣಾಭಾವದಿಂದ ಲೋಕ ಕಲ್ಯಾಣಕ್ಕಾಗಿ ಶ್ರಮಿಸಬೇಕು. ಸಾಮಾಜಿಕ ಕ್ಷೇಮಾಭ್ಯುದಯವನ್ನು ಅಧಿಕಗೊಳಿಸಬೇಕು. ಅದು ಪರಸ್ಪರ ಸಹಕಾರದಿಂದ ಮಾತ್ರ ಸಾಧ್ಯವಾಗುತ್ತದೆ. ಎಲ್ಲರೂ ಜೀವನವನ್ನು ನಡೆಸಲು ಅವಶ್ಯಕತೆಗಳನ್ನು ಪೂರೈಸಿ ಕೊಳ್ಳಲೇಬೇಕಾಗಿರುವುದರಿಂದ ಜೀವನೋಪಾಯಕ್ಕೆ ಸಹಾಯಕವಾಗುವಂತಹ ಸಂಪನ್ಮೂಲಗಳನ್ನು ವ್ಯರ್ಥ ಮಾಡದೆ ಸಮಯೋಚಿತವಾಗಿ ಉತ್ಪಾದನೆಯಲ್ಲಿ ಬಳಸಲು ಎಲ್ಲರೂ ಸಮಗ್ರ ಚಿಂತನೆ ನಡೆಸಿ ಯೋಗ್ಯ ರೀತಿಯಲ್ಲಿ ಯೋಜನೆಯನ್ನು

ಹಮ್ಮಿಕೊಂಡು ಆರ್ಥಿಕವಾಗಿ ಮತ್ತು ನೈತಿಕವಾಗಿ ಸಾಮಾಜಿಕ ಪರಿಸರ ಉತ್ತಮಗೊಂಡು ಪರಸ್ಪರ ಕಾಳಜಿ ವಹಿಸಿದಾಗ ಮಾತ್ರ ನಿಸ್ವಾರ್ಥ ಸೇವೆಯ ತತ್ವಾಧಾರಿತ ಅಮೂಲ್ಯ ಜೀವನ ನಡೆಸಲು ಸಾಧ್ಯ. ಇದಕ್ಕೆ ದೃಢವಾದ ಸಂಕಲ್ಪ ಇರಬೇಕು.

**ಸತ್ಯ, ನ್ಯಾಯ, ದಯೆ ಮತ್ತು ಸ್ವಾತಂತ್ರ್ಯದಿಂದ ಕೂಡಿದ ಸಾಮಾಜಿಕ ಜೀವನ**

ಭಯದಿಂದ ಮುಕ್ತವಾದ ಮತ್ತು ಶುದ್ಧವಾದ ಮನಸ್ಸು ಹೊಂದಿದ ಮನುಷ್ಯ ಮಾತ್ರ ಸತ್ಯವನ್ನು ಅಳವಡಿಸಿಕೊಳ್ಳಲು ಸಾಧ್ಯ. ಇಲ್ಲಿ ಹಿಂಸೆಗೆ ಅವಕಾಶವಿಲ್ಲ. ಸತ್ಯದಿಂದ ಮಾತ್ರ ಮಾನವನ ಅಭಿವೃದ್ಧಿಯಾಗುತ್ತದೆ. ಸರ್ಕಾರದ ನೀತಿಯು ಸತ್ಯದ ಆಧಾರದ ಮೇಲೆ ರಚನೆಯಾದಾಗ ಜನರಿಗೆ ನ್ಯಾಯ ಒದಗಿಸಿದಂತಾಗುತ್ತದೆ. ಮಾನವನು ಸಹಜವಾಗಿ ಬುದ್ಧಿಜೀವಿಯಾಗಿರುತ್ತಾನೆ. ಯಾವುದು ನ್ಯಾಯ, ಸತ್ಯ ಎಂಬ ಅರಿವು ಅವನಿಗಿದ್ದರೂ ಸೂಕ್ತವಾದ ಮಾರ್ಗದರ್ಶನದ ಅವಶ್ಯಕತೆ ಅವನಿಗೆ ಬೇಕಾಗುತ್ತದೆ ಎಂದು ದೈವಪ್ರವರ್ತಕ ಪಾಲ್ ಅವರ ಅಭಿಪ್ರಾಯವಾಗಿರುತ್ತದೆ. ಕಾನೂನು ಶಿಕ್ಷಣ ಪ್ರಸಾರದ ಮೂಲಕ ಜನರಲ್ಲಿ ಕಾನೂನಿನ ಬಗ್ಗೆ ಅರಿವನ್ನುಂಟು ಮಾಡಿ ತಮಗೆ ಒದಗಿಸಿದ ಹಕ್ಕನ್ನು ಪಡೆಯುವಲ್ಲಿ ಮತ್ತು ಇತರರ ಹಕ್ಕಿಗೆ ಧಕ್ಕೆಯನ್ನೊಡ್ಡದಂತೆ ಸಹಬಾಳ್ವೆ ನಡೆಸುವ ವಾತಾವರಣ ಕಲ್ಪಿಸಬೇಕು.

ಮಾನವನ ಬದುಕು ಸಹನೀಯವಾಗಲು ನೀತಿಯುಕ್ತ ಶಿಕ್ಷಣದಿಂದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಜನರು ತಮ್ಮನ್ನು ತೊಡಗಿಸಿಕೊಂಡು ಸದ್ಭಢತೆ, ಪಾರದರ್ಶಕತೆ, ಸಹನಶೀಲತೆ, ಅಹಿಂಸೆ, ಪಾಂಡಿತ್ಯ ಪ್ರಜ್ಞೆ, ಆಧ್ಯಾತ್ಮಿಕ ಶಿಸ್ತು, ಪ್ರತಿಭೆಯನ್ನು ಗುರುತಿಸಿ ಸ್ಫೂರ್ತಿ ನೀಡುವ ಹೃದಯ ಶ್ರೀಮಂತಿಕೆ ಮೊದಲಾದ ಮಾನವೀಯ ಮೌಲ್ಯಗಳನ್ನು ಬಿತ್ತರಿಸುವಲ್ಲಿ ಸಾಮಾಜಿಕ ಕಾರ್ಯಕರ್ತರು ಮತ್ತು ಸರ್ಕಾರ ಸೇರಿ ಎಲ್ಲರೂ ಪ್ರೀತಿಯಿಂದ ಮತ್ತು ಶಾಂತಿಯಿಂದ ಬಾಳಲು ಪ್ರೇರೇಪಿಸಬೇಕು.

**ದೇವರು ಮತ್ತು ನೀತಿಯ ಕಟ್ಟಳೆ**

ದೇವರು ಮಾನವನ ಜೀವನಕ್ಕೆ ನೀತಿಯುಕ್ತ ಮಾರ್ಗವನ್ನು ಸಿದ್ಧ ಮಾಡಿದ್ದಾನೆ. ಆತನ ಶಕ್ತಿಯನ್ನು ಅರಿತುಕೊಂಡು ಅವನು ತೋರಿಸಿದ ಮಾರ್ಗದಲ್ಲಿ ನಡೆಯಬೇಕು. ಎಲ್ಲರೂ ಅಸತ್ಯ ಮತ್ತು ದ್ವೇಷಗಳನ್ನು ತೊರೆದು ಸತ್ಯಮಾರ್ಗದಲ್ಲಿ ಬಾಳಲು ಸಂಕಲ್ಪ ಮಾಡಬೇಕು. ಮಾನವೀಯತೆಗಳ ಅಂಶಗಳೇ ಇಲ್ಲಿ ಬಾಳ ನೀತಿಯಾಗಿರುತ್ತವೆ. ನೀತಿಯ ಆಧಾರದ ಮೇಲೆ ಧರ್ಮ ನಿಂತಿದೆ. ನೀತಿ–ನಿಯಮಗಳಿಗನುಗುಣವಾಗಿ ತನ್ನ ಜೀವನವನ್ನು ವ್ಯವಸ್ಥೆಗೊಳಿಸಿಕೊಂಡು ಇನ್ನೊಬ್ಬರ ಹೃದಯ ಮುಟ್ಟುವಂತಿರಬೇಕು.



**ಪ್ರಸ್ತುತ ಸಮಾಜ**

ಮೊದಲನೆಯದಾಗಿ, ಪ್ರಸ್ತುತ ಸಮಾಜದಲ್ಲಿ ಕಾರ್ಮಿಕರು ಕೇವಲ ಕೆಲಸ ಮಾಡುವ ಯಂತ್ರಗಳಾಗಿರುವುದಿಲ್ಲ. ಅವರು ಪ್ರಸಕ್ತ ಸ್ಥಿತಿಗತಿಗಳ ಅರಿವು ಉಳ್ಳವರಾಗಿರುತ್ತಾರೆ. ಉನ್ನತ ಆರ್ಥಿಕ ಜೀವನಮಟ್ಟ ಹಾಗೂ ಸಾಮಾಜಿಕ ನ್ಯಾಯವನ್ನು ಪಡೆಯುವ ಹಕ್ಕನ್ನು ಹೊಂದಿರುತ್ತಾರೆ. ಕಾರ್ಮಿಕರು ದೇಶದ ಬೆನ್ನೆಲುಬಾಗಿರುತ್ತಾರೆ. ಅವರ ಶೋಷಣೆ ಸಲ್ಲದು. ಹಾಗಾಗಿ ಬಡತನ, ನಿರಕ್ಷರತೆ, ಮೌಢ್ಯ, ರೋಗರುಜಿನಾದಿಗಳು ಮುಂತಾದ ಸಾಮಾಜಿಕ ಸಮಸ್ಯೆಗಳನ್ನು ಹೊಡೆದೋಡಿಸಲು ಧೃಡ ಪ್ರಯತ್ನ ಮಾಡಬೇಕು.

ಎರಡನೆಯದಾಗಿ, ಇಂದು ಮಹಿಳೆ ಸಾರ್ವಜನಿಕ ರಂಗವನ್ನು ಪ್ರವೇಶಿಸುತ್ತಿದ್ದಾಳೆ. ಬಹುಶಃ ಕ್ರೈಸ್ತ ಸಂಸ್ಕೃತಿಯ ರಾಜ್ಯಗಳಲ್ಲಿ ಹೆಚ್ಚಿಗೆ ಕಾಣಿಸಿಕೊಂಡಿದ್ದು, ಇತರ ಸಂಸ್ಕೃತಿಗಳ ದೇಶಗಳಲ್ಲಿ ನಿಧಾನವಾಗಿ ಆದರೆ ವ್ಯಾಪಕವಾಗಿ ಕಾಣಬರುತ್ತಿದೆ. ಮಹಿಳೆ ಕೇವಲ ಪ್ರಾಪಂಚಿಕ ವಸ್ತುಗಳ ಸಾಧನವಾಗಿ ಮನೆಯನ್ನು ನಡೆಸುವುದೊಂದೇ ಅವಳ ದಾರಿಯಾಗಿತ್ತು. ಆದರೆ ಈಗ ಅವಳಲ್ಲಿರುವ ಅನೇಕ ಸೃಜನಶೀಲತ್ವ ಗುಣಗಳು ಮತ್ತು ಕ್ರಿಯಾಶೀಲತೆಯ ಪ್ರಯೋಜನವು ಸಮಾಜಕ್ಕೆ ದೊರಕುತ್ತಿದೆ. ಆದರೆ ಅವಳಿಗೆ ಸಾಕಷ್ಟು ಸ್ವಾತಂತ್ರ್ಯವೂ ಇರಬೇಕು. ಅದಕ್ಕಾಗಿ ಸರ್ಕಾರವು ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಉನ್ನತಿಗಾಗಿ ಮಹಿಳಾ ಸಬಲೀಕರಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ.

ಕೊನೆಯದಾಗಿ, ಇತ್ತೀಚೆಗೆ ಸುಧಾರಿತ ಸಮಾಜದಲ್ಲಿ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಹೊಸ ಹೊಸ ವಿಚಾರಗಳ ಅಲೆಗಳು ಕಾಣಬರುತ್ತಿವೆ. ಎಲ್ಲ ರಾಷ್ಟ್ರಗಳೂ ಕೂಡ ಸ್ವಾತಂತ್ರ್ಯಕ್ಕಾಗಿ ತಮ್ಮದೇ ಆದ ರೀತಿಯಲ್ಲಿ ಹೋರಾಡುತ್ತಿವೆ. ಇದು ಕೇವಲ ರಾಜಕೀಯ ಕ್ಷೇತ್ರದಲ್ಲಷ್ಟೇ ಅಲ್ಲ. ಇನ್ನು ಮುಂದೆ ವಿಶ್ವದಲ್ಲಿ ಒಂದರ ಮೇಲೊಂದು ಪ್ರಭುತ್ವವನ್ನು ಚಲಾಯಿಸುವ, ಅಥವಾ ಒಂದರ ಕೈಕೆಳಗೆ ಇರುವ ರಾಷ್ಟ್ರಗಳಾಗಲೀ ಇರುವುದಿಲ್ಲ.

ಶೀಘ್ರದಲ್ಲಿಯೇ ಎಲ್ಲರೂ ಸ್ವತಂತ್ರ ರಾಷ್ಟ್ರಗಳ ಪ್ರಜೆಗಳ ಅಂತಸ್ತನ್ನು ಹೊಂದಿದವರಾಗಿರುತ್ತಾರೆ. ತನ್ನ ದೇಶವನ್ನು ಬಿಟ್ಟು ಇತರ ರಾಜಕೀಯ ಅಥವಾ ಜನಾಂಗೀಯ ಗುಂಪಿನ ಆಶ್ರಯದಲ್ಲಿ ಇರಲು ಯಾರೂ ಇಚ್ಛಿಸುವುದಿಲ್ಲ. ಹೀಗಾಗಿ ಸಾವಿರಾರು ವರ್ಷಗಳ ಹಿಂದೆ ಇದ್ದ ಕೀಳರಿಮೆಯ ಸ್ಥಿತಿಯು ಇಂದು ಮಾಯವಾಗುತ್ತಿದೆ. ಅದೇರೀತಿ ಕೆಲವು ರಾಷ್ಟ್ರಗಳಲ್ಲಿದ್ದ ಸಮಾಜೋ ಧಾರ್ಮಿಕ, ಲಿಂಗಭೇದ ಮತ್ತು ರಾಜಕೀಯ ಮೇಲರಿಮೆಯೂ ಕಾಣದಾಗುತ್ತಿದೆ.

ಅದೇ ರೀತಿ ಎಲ್ಲರೂ ಸಮಾನ ಅಂತಸ್ತಿನವರು ಎಂಬ ವಾದವೂ ಒಪ್ಪಿಗೆ ಪಡೆಯುತ್ತಿದೆ. ಹೀಗಾಗಿ ಜನಾಂಗೀಯ ಶ್ರೇಷ್ಠತೆಯನ್ನು ತಾತ್ವಿಕವಾಗಿಯೂ

ಯಾರೂ ಮಾನ್ಯ ಮಾಡುತ್ತಿಲ್ಲ. ಇದು ನಾವು ಮೇಲೆ ಹೇಳಿರುವ ಅಂಶಗಳಿಗೆ ಬಹಳ ಪ್ರಮುಖವಾದುದು. ಮಾನವನು ತನ್ನ ಹಕ್ಕುಗಳ ಬಗೆಗೆ ತಿಳಿವಳಿಕೆ ಹೊಂದಿದವನಾದರೆ, ಅವನು ತನ್ನ ಬಾಧ್ಯತೆಗಳನ್ನೂ ಅರಿಯಬೇಕಾಗುತ್ತದೆ. ಆದುದರಿಂದ ಕೆಲವು ಹಕ್ಕುಗಳನ್ನು ಹೊಂದಿರುವವರು, ಗೌರವಯುತ ಜೀವನವನ್ನು ನಡೆಸುವ ದೃಷ್ಟಿಯಿಂದ ಬಾಧ್ಯತೆಗಳನ್ನೂ ಗೌರವಿಸಿ ಅದರಂತೆ ನಡೆಯಬೇಕಾಗುತ್ತದೆ.

ಒಂದು ಸಮಾಜವು ತನ್ನ ಸಂಬಂಧಗಳನ್ನು ಹಕ್ಕು ಮತ್ತು ಬಾಧ್ಯತೆಗಳ ಮೂಲಕ ಅಭಿವ್ಯಕ್ತಗೊಳಿಸಿದರೆ, ಅಲ್ಲಿನ ಜನಗಳು ಆಧ್ಯಾತ್ಮಿಕ ಮೌಲ್ಯಗಳ ಕಡೆಗೆ ತಿರುಗಿ, ಸತ್ಯ, ನ್ಯಾಯ, ದಾನ, ಸ್ವಾತಂತ್ರ್ಯ ಮುಂತಾದವುಗಳನ್ನು ಅರಿಯುತ್ತಾರೆ. ಆಗ ಅವರು ಮೌಲ್ಯಾಧಾರಿತ ಸಮಾಜದ ಕಡೆ ಹೋಗುತ್ತಾರೆ. ಈ ರೀತಿ ಕಾಳಜಿ ತೋರಿಸಿದಾಗ ಪರಮಾತ್ಮನ ಸಮೀಪದ ಜ್ಞಾನ ಅವರಿಗೆ ಉಂಟಾಗುತ್ತದೆ. ಇದರಿಂದ ಅವರು ದೇವರ ತೆಕ್ಕೆಯೊಳಗೆ ಸೇರಿಕೊಳ್ಳುತ್ತಾರೆ. ಅವರು ತಮ್ಮ ಆತ್ಮಗಳ ಆಂತರಿಕ ಆಳವನ್ನು ಅರಿತುಕೊಂಡು, ಸಮಾಜದ ಇತರ ಜನಗಳೊಂದಿಗೆ ತಾದಾತ್ಮ್ಯದ ಬಾಳುವೆ ನಡೆಸುತ್ತಾರೆ.

* * * *



## ೨. ವ್ಯಕ್ತಿಗಳು ಮತ್ತು ಸಾರ್ವಜನಿಕ ಪ್ರಾಧಿಕಾರಗಳು

ಮಾನವ ಸಮಾಜವು ಸುಖ, ಸಮೃದ್ಧಿ ಮತ್ತು ನೆಮ್ಮದಿಯಿಂದ ಈ ಭೂಮಿಯಲ್ಲಿ ನೆಲೆಸಬೇಕೆಂದರೆ ಆದರ್ಶ ಗುಣಗಳುಳ್ಳ ನಿಸ್ವಾರ್ಥತೆ ಸಮಾಜದ ಒಳಿತಿಗಾಗಿ ಶ್ರಮಿಸುವ ಜನರ ಅವಶ್ಯಕತೆ ಇದೆ. ಎಲ್ಲರಿಂದಲೂ ಇದು ಸಾಧ್ಯವಾಗದ ಮಾತು. ಅವರು ದೇವರಿಂದ ಅಧಿಕಾರವನ್ನು ಪಡೆದವರಾಗಿರುತ್ತಾರೆ. ಅದಕ್ಕೆ ಸಂತಪಾಲ್ ಹೇಳುವಂತೆ "ಅಧಿಕಾರವು ದೇವರಿಂದ ಮಾತ್ರ ಕೊಡಲ್ಪಡುತ್ತದೆ." ಸಂತಪಾಲನ ಮಾತುಗಳನ್ನು ಜಾನ್ ಕ್ರೈಸೊಸ್ಟಾಮ್ ಹೀಗೆ ವಿವರಿಸುತ್ತಾರೆ. ನೀವು ಹೇಳುತ್ತಿದ್ದೀರಿ? ಪ್ರತಿಯೊಬ್ಬ ರಾಜನೂ ದೇವರಿಂದ ನಿಯಮಿಸಲ್ಪಟ್ಟನೇ? ನಾನು ಪ್ರತಿರಾಜನನ್ನೂ ಕೇಳುವುದಿಲ್ಲ. ನಾನು ಪ್ರಶ್ನಿಸುವುದು ಅಧಿಕಾರವನ್ನು. ಅಲ್ಲಿ ಒಂದು ಸರ್ಕಾರವಿರಬೇಕು; ಪ್ರಭುತ್ವವಿರಬೇಕು ಮತ್ತು ಎಲ್ಲರೂ ಅದನ್ನು ಗೌರವಿಸಬೇಕು ಎನ್ನುವುದು ಆಕಸ್ಮಿಕವಲ್ಲ; ಇದು ದೈವೀ ನಿಯಮ. ಮಾನವನು ಈ ದೇವನಿರ್ಮಿತ ಸಮಾಜದಲ್ಲಿ ಸಂಘಜೀವಿಯಾಗಿದ್ದಾನೆ. ದೇವರು ಈ ಜಗತ್ತನ್ನು ಸೃಷ್ಟಿಸಿದ್ದಾನೆ. ಇಲ್ಲಿ ಎಲ್ಲವೂ ದೇವರ ಆಜ್ಞೆಯಂತೆ ದೇವದೂತರ ಮೂಲಕ ನಡೆಯುತ್ತದೆ.

ಅಧಿಕಾರ ಎನ್ನುವುದು ನಿಯಂತ್ರಣವಿಲ್ಲದ ಶಕ್ತಿಯಲ್ಲ. ಅದು ಜನತೆಯನ್ನು ಸರಿಯಾದ ದಾರಿಯಲ್ಲಿ ನಡೆಸಿಕೊಂಡು ಹೋಗಬೇಕಾಗಿರುವುದರಿಂದ, ಆ ಶಕ್ತಿಯು ಮೌಲ್ಯಗಳಿಂದ ಬರುತ್ತದೆ. ಅಂದರೆ ಅದು ದೇವರಿಂದಲೇ ಬರುತ್ತದೆ. ಸಮಾಜದಲ್ಲಿರುವ ಎಲ್ಲ ಚಟುವಟಿಕೆಗಳೂ ಭಗವಂತನ ಪ್ರೇರಣೆಯಿಂದಲೇ ನಡೆಯುತ್ತದೆ. ಆದರೂ ಕೆಲವೊಮ್ಮೆ ಮಾವನ ವ್ಯಕ್ತಿ ಸ್ವಾತಂತ್ರ್ಯದಿಂದಾಗಿ ತನ್ನ ಆತ್ಮಸಂತೋಷಕ್ಕೆ ಬೆಲೆ ಕೊಟ್ಟಾಗ ಸಮಾಜಸೇವೆ ಮಾಡಲಾರ. ಅದರಿಂದ ಕೆಟ್ಟದಾಗಲೂಬಹುದು. ಹಾಗಾಗಿ ವ್ಯವಸ್ಥಿತವಾದ ನಿಯಂತ್ರಣಶಕ್ತಿಯುಳ್ಳ ಅಧಿಕಾರ ಇರಬೇಕು.

ನಮ್ಮ ಹಿಂದಿನವರಾದ, ಸಂತೋಷದಿಂದ ನಾವು ಜ್ಞಾಪಿಸಿಕೊಳ್ಳುವ ಪಯಸ್ XII ಅವರು ಹೇಳುವಂತೆ ಆಡಳಿತಾಧಿಕಾರವು ಸವಾಜದಲ್ಲಿರುವ ಲೋಪದೋಷಗಳನ್ನು ಸರಿಪಡಿಸಲು ಬೆದರಿಕೆಯನ್ನೊಡ್ಡುವದು ಹಿಂಸಾತ್ಮಕವಾದ ದಾರಿಯನ್ನು ಅಥವಾ ಪೊಳ್ಳು ಆಶ್ವಾಸನೆಯನ್ನೀಯುವುದು ಮುಂತಾದ ಅನ್ಯಮಾರ್ಗವನ್ನು ಅನುಸರಿಸಬಾರದು. ಇದು ಜನರ ಮನಸ್ಸನ್ನು ಸ್ಪಂದಿಸುವುದಿಲ್ಲ. ಆಡಳಿತ ಸಂಪೂರ್ಣ ನೀತಿಯುಕ್ತವಾಗಿರಬೇಕು. ಅದು ಎಲ್ಲ ಕಾಲಕ್ಕೂ ಮತ್ತು

ಪ್ರದೇಶಕ್ಕೂ ಸಾರ್ವತ್ರಿಕವಾದುದಾಗಿದೆ. ಅದನ್ನು ದೇವರೇ ನಿರ್ಮಿಸಿದ್ದುದರಿಂದ ಎಲ್ಲವೂ ಒಳ್ಳೆಯದಾಗಿದ್ದು ಸಾರ್ವತ್ರಿಕವಾಗಿರುತ್ತದೆ.

ನಾವೆಲ್ಲರೂ ಅಧಿಕಾರ ಹೊಂದಲು ಸಾಧ್ಯವಾಗದೇ ಇರುವುದರಿಂದ ಕೆಲವೇ ಜನರು ಅಧಿಕಾರವನ್ನು ಹಂಚಿಕೊಳ್ಳಬೇಕಾಗುತ್ತದೆ. ಸೆಂಟ್ ಥಾಮಸ್ ಅಕ್ವಿನಾಸ್‌ರ ಅಭಿಪ್ರಾಯದಂತೆ "ಮಾನವನ ಶಾರೀರಿಕ ತೃಪ್ತಿಗಿಂತ ಆತ್ಮತೃಪ್ತಿಯ ಸುಖವು ಹೆಚ್ಚಿನದು. ವಿವೇಚನಾಯುಕ್ತ ಸುಖವೇ ಜಗತ್ತಿನ ಪರಮ ಸುಖ. ಈ ಜಗತ್ತನ್ನು ಸೃಷ್ಟಿಸಿದ ದೇವರ ಇಚ್ಛೆಯಂತೆಯೇ ರಾಜ್ಯ ಮತ್ತು ಸರ್ಕಾರವು ರಚನೆಯಾಗಿದೆ. ಹಾಗಾಗಿ ರಾಜಕೀಯ ಅಧಿಕಾರವೂ ಕೂಡ ದೇವರಿಂದಲೇ ದೊರಕಿರುವುದಿಲ್ಲ ವಾದರೂ ಕೆಲವೇ ಜನರು ಅದನ್ನು ವಹಿಸಿಕೊಂಡಿರುತ್ತಾರೆ. ರಾಜ್ಯ, ಸರ್ಕಾರ ಮತ್ತು ಅಧಿಕಾರಗಳು ಸತ್ಯ, ಸದ್ಗುಣ ಪ್ರಾಮಾಣಿಕತೆಗಳ ಜೊತೆಗೆ 'ಜೀವನಕ್ಕೆ ಅವಶ್ಯಕವಾದ ಆಹಾರ, ಬಟ್ಟೆ ವಸತಿ, ಶಿಕ್ಷಣ ಮೊದಲಾದವುಗಳಿಗೂ ಆದ್ಯತೆ ನೀಡಬೇಕಾಗಿರುತ್ತದೆ. ಆಗ ಮಾತ್ರ ಜನತೆ ಪರಮಸುಖವನ್ನು ಪಡೆದು ಆತ್ಮತೃಪ್ತಿಯನ್ನು ಹೊಂದುತ್ತದೆ. ಇದಕ್ಕಾಗಿಯೇ ಸರ್ಕಾರ ಅವಶ್ಯಕವಾದ ಕಾನೂನನ್ನು ರಚಿಸಬೇಕು. ಈ ಕಾನೂನು ಒಂದು ವೇಳೆ ದೇಶಕ್ಕೆ ಅಥವಾ ಸಮಾಜಕ್ಕೆ ಒಳ್ಳೆಯದನ್ನು ಮಾಡದೇ ಹಾನಿಯನ್ನುಂಟುಮಾಡಿದರೆ ಆಗ ಸಮಾಜದ ನೆಮ್ಮದಿ ಮತ್ತು ಶಾಂತಿ ಇಳಿಮುಖವಾಗಿ ಹಾನಿಯನ್ನುಂಟುಮಾಡುತ್ತದೆ. ಇದರಿಂದ ಇಡೀ ಪ್ರಪಂಚಕ್ಕೆ ಕೇಡುಕುಗೈದಂತಾಗುತ್ತದೆ." ಅಧಿಕಾರವು ದೇವರಿಂದ ಬರುವುದರಿಂದ, ಜನಗಳಿಗೆ ನಮ್ಮ ನಾಯಕರನ್ನು ಆರಿಸುವ ಹಕ್ಕು ಇಲ್ಲ. ಹಾಗೂ ನಮಗೆ ಯಾವ ರೀತಿಯ ಸರ್ಕಾರ ಬೇಕು ಎಂಬುದನ್ನು ತೀರ್ಮಾನಿಸಲು ಹಕ್ಕಿಲ್ಲ ಎಂದು ತಿಳಿಯಬಾರದು. ಆದುದರಿಂದ ನಾವು ಮೇಲೆ ಹೇಳಿರುವ ಸಿದ್ಧಾಂತಗಳೆಲ್ಲವೂ ಪ್ರಜಾಪ್ರತಿನಿಧಿ ಆಡಳಿತಕ್ಕೆ ಪೂರಕವಾಗಿಯೇ ಇದೆ.

**ಸಾರ್ವಜನಿಕ ಅಧಿಕಾರದ ಉದ್ದೇಶಗಳು**

ಪ್ರತಿಯೊಬ್ಬ ಮನುಷ್ಯನೂ ಮತ್ತು ಜನಗಳ ಶ್ರೇಣಿಗಳು ಸಾಮಾನ್ಯರ ಒಳಿತಿಗಾಗಿ ತಮ್ಮ ಕೊಡುಗೆಯನ್ನು ನೀಡಬೇಕು. ತಮ್ಮ ಆಸಕ್ತಿಗಳನ್ನು ಸಾರ್ವಜನಿಕ ಆಸಕ್ತಿಗಳ ಮುಖ್ಯ ವಾಹಿನಿಗೆ ಸೇರಿಸಬೇಕು. ಅವು ನ್ಯಾಯಯುತವಾಗಿರುವಂತೆ ನೋಡಿಕೊಳ್ಳ ಬೇಕು. ಸಾರ್ವಜನಿಕ ಅಧಿಕಾರದ ಮುಖ್ಯ ಉದ್ದೇಶವೆಂದರೆ ಮಾನವ ನಿರ್ಮಿತ ಕಾಯಿದೆಗಳು ನಿಸರ್ಗ ನಿಯಮಕ್ಕೆ ವಿರುದ್ಧವಾಗಿರಬಾರದು. ಒಂದು ವೇಳೆ ಬಲಾತ್ಕಾರವಾಗಿ ಹೇರಿದರೆ ಅವು ಹೆಚ್ಚು ಕಾಲ ಉಳಿಯಲಾರವು. ನಾಗರೀಕ ಕಾಯಿದೆಗಳು ವಿವೇಚನೆ ಮತ್ತು ವಿಚಾರವಂತಿಕೆಯಿಂದಿರಬೇಕು. ಈ ಕಾಯಿದೆಗಳ ಉದ್ದೇಶ ಜನರ ಕಲ್ಯಾಣಕ್ಕಾಗಿರಬೇಕು. ಯಾಕೆಂದರೆ ನಾವೆಲ್ಲ ಒಬ್ಬನೇ ಸೃಷ್ಟಿಕರ್ತನ ಮಕ್ಕಳು. ಎಲ್ಲರಲ್ಲೂ ದೈವೀ ಶಕ್ತಿ ಅಪಾರವಾಗಿದೆ. ಯಾವುದೇ ಸರ್ಕಾರ ಎಲ್ಲರ



ಒಳಿತನ್ನು ಸಾಧಿಸುವ ಗುರಿಯನ್ನು ಮುಟ್ಟುವುದಿಲ್ಲವೋ ಅಂತಹ ಸರ್ಕಾರ ಜಗನ್ನಿಯಾಮಕನಿಗೆ ದ್ರೋಹ ಬಗೆದು, ಮಾನವನ ದೇಹ, ಮನಸ್ಸು ಮತ್ತು ಆತ್ಮಗಳನ್ನು ಕ್ಷೀಣಗೊಳಿಸುತ್ತದೆ. ನಿಸರ್ಗ ನಿಯಮವನ್ನು ಹಾಳುಮಾಡಿ ಸರ್ವರ ಒಳಿತನ್ನು ನಾಶಪಡಿಸುತ್ತದೆ.

**ಸಾರ್ವಜನಿಕ ಅಧಿಕಾರ ಮತ್ತು ವ್ಯಕ್ತಿಗಳು**

ಸಾಮಾನ್ಯ ಮನುಷ್ಯನ ಹಕ್ಕು, ಬಾಧ್ಯತೆಗಳನ್ನು ಸರಿಯಾಗಿ ತೂಗಿಸಿಕೊಂಡರೆ ಎಲ್ಲರ ಒಳಿತನ್ನೂ ಗೌರವಿಸಿದಂತೆ ಆಗುತ್ತದೆ. ಆದುದರಿಂದ ಅಧಿಕಾರಿಗಳ ಮುಖ್ಯ ಕೆಲಸವೆಂದರೆ ಈ ಹಕ್ಕುಗಳನ್ನು ಒಪ್ಪಿಕೊಂಡು, ಗೌರವಿಸಿ, ಇತರ ಹಕ್ಕುಗಳೊಡನೆ ಸರಿತೂಗಿಸಿ, ಅವುಗಳನ್ನು ಕಾಪಾಡಿದಾಗ ಪ್ರತಿಯೊಬ್ಬರೂ ಸುಲಭವಾಗಿ ತಮ್ಮ ತಮ್ಮ ಕರ್ತವ್ಯಗಳನ್ನು ಮಾಡಲು ಅನುಕೂಲವಾಗುತ್ತದೆ. ಆದುದರಿಂದ ಎಲ್ಲ ಸಾರ್ವಜನಿಕ ಅಧಿಕಾರಗಳ ಕರ್ತವ್ಯವೂ ಇದನ್ನೇ ಮುಖ್ಯವಾಗಿ ಮಾಡಬೇಕಾಗುತ್ತದೆ.

ಅಂದರೆ, ಒಂದು ಸರ್ಕಾರವು ಪ್ರಜೆಗಳ ಹಕ್ಕುಗಳನ್ನು ಗಮನಿಸದೇ ಅವುಗಳನ್ನು ಉಲ್ಲಂಘಿಸಿದರೆ, ಅಂತಹ ಸರ್ಕಾರ ತನ್ನ ಕರ್ತವ್ಯದಲ್ಲಿ ವಿಮುಖವಾಗಿರುವುದು ಮಾತ್ರವಲ್ಲ, ನ್ಯಾಯಕ್ಕೂ ದ್ರೋಹವೆಸಗಿದಂತೆ ಆಗುತ್ತದೆ.

**ಸಂಧಾನ ಮಾರ್ಗ**

ಸರ್ಕಾರದ ಮುಖ್ಯ ಕರ್ತವ್ಯವೆಂದರೆ ಮಾನವನ ಹಕ್ಕು ಮತ್ತು ಗೌರವಗಳನ್ನು ಕಾಪಾಡುವದು. ವಿಶ್ವದಲ್ಲಿ ಎಲ್ಲರೂ ಸಮಾನ ಹಕ್ಕು ಮತ್ತು ಗೌರವಗಳನ್ನು ಪಡೆದುಕೊಂಡೇ ಜನಿಸಿರುವರು. ಎಲ್ಲರಿಗೂ ವಿಚಾರಶಕ್ತಿ ಮತ್ತು ಪ್ರಜ್ಞೆ ಇರುವುದರಿಂದ ಭೇದಭಾವವಿಲ್ಲದೆ ಜೀವಿಸುವಂತಿರಬೇಕು. ಒಂದು ವೇಳೆ ಮೂಲಭೂತ ಹಕ್ಕುಗಳು ಉಲ್ಲಂಘಿಸಲ್ಪಟ್ಟಾಗ ಸೂಕ್ತ ಕಾಲದಲ್ಲಿ ಸಭೆ ಸೇರಿಸಿ ಸಂಧಾನ ಮಾರ್ಗದಲ್ಲಿ ರಕ್ಷಣೆ ಒದಗಿಸಬೇಕು.

**ಕರ್ತವ್ಯ**

ಸಾರ್ವಜನಿಕರ ಒಳಿತಿಗಾಗಿ ಅಧಿಕಾರಗಳು ಪ್ರತಿಯೊಬ್ಬನೂ ತನ್ನ ಹಕ್ಕುಗಳನ್ನು ಚಲಾಯಿಸಲು ಅವಕಾಶ ಮಾಡಿಕೊಡಬೇಕು ಹಾಗೂ ಅವರು ತಮ್ಮ ಬಾಧ್ಯತೆಗಳನ್ನು ಪೂರೈಸಲು ಅನುಕೂಲವಾಗಬೇಕು. ಇದನ್ನು ಮಾಡದೇ ಹೋದರೆ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ವಿಷಯಗಳಲ್ಲಿ ಜನಗಳಲ್ಲಿ ಅಸಮಾನತೆಯು ಹೆಚ್ಚಿ, ಅದರಲ್ಲಿಯೂ ಈ ಆಧುನಿಕ ಪ್ರಪಂಚದಲ್ಲಿ, ಮಾನವನ

ಹಕ್ಕುಗಳಿಗೆ ಬೆಲೆ ಇಲ್ಲದಂತೆ ಆಗುತ್ತದೆ ಮತ್ತು ಬಾಧ್ಯತೆಗಳೊಡನೆ ರಾಜಿ ಮಾಡಿಕೊಳ್ಳಬೇಕಾಗುತ್ತದೆ.

ಆದುದರಿಂದ ಆಡಳಿತವು ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗೆ ವಿಶೇಷ ಗಮನವನ್ನು ನೀಡಬೇಕು. ಇದರಿಂದ ಉತ್ಪಾದನೆಯು ಹೆಚ್ಚಾಗಿ ಪ್ರಮುಖ ಸಾಧನಗಳಾದ ರಸ್ತೆಗಳ ನಿರ್ಮಾಣ, ಸಾರಿಗೆ ವ್ಯವಸ್ಥೆ, ಆರೋಗ್ಯ, ಶಿಕ್ಷಣ, ಕುಡಿಯುವ ನೀರಿನ ವ್ಯವಸ್ಥೆ, ಮನೆಗಳ ನಿರ್ಮಾಣ, ಧಾರ್ಮಿಕ ಕಾರ್ಯಗಳು ಹಾಗೂ ಮನರಂಜನೆ ಮುಂತಾದವುಗಳಿಗೆ ಪೋಷಣೆ ಸಿಕ್ಕಿದಂತಾಗುತ್ತದೆ. ಅಷ್ಟೇ ಅಲ್ಲದೆ, ಸರ್ಕಾರವು ವಿಮೆಯ ಪದ್ಧತಿಯನ್ನು ಜಾರಿಗೆ ತಂದು, ತೊಂದರೆಯ ಸಮಯಗಳಲ್ಲಿ ಯಾವೊಬ್ಬನೂ ಆರ್ಥಿಕತೆಯಿಂದ ವಂಚಿತನಾಗಿ, ಒಳ್ಳೆಯ ಜೀವನವನ್ನು ನಡೆಸದೇ ಇರದಂತೆ ಆಗಬಾರದು. ಕೆಲಸ ಮಾಡಲು ಶಕ್ತಿಯಿರುವವರಿಗೆ, ಅವರ ಅಭಿರುಚಿಗೆ ನ್ಯಾಯವಾದ ಸಂಬಳಗಳು ಸಿಗಬೇಕು. ಔದ್ಯೋಗಿಕ ಸಂಸ್ಥೆಗಳಲ್ಲಿ ಕೆಲಸಗಾರರಿಗೆ ಸರಿಯಾದ ವಾತಾವರಣವನ್ನು ನಿರ್ಮಿಸಿ, ಸಾಮಾಜಿಕ ಜೀವನವು ಇನ್ನೂ ಶ್ರೀಮಂತವಾಗುವಂತೆ ಮಾಡಬೇಕು. ಕೊನೆಯದಾಗಿ ದೇಶದ ಸಾಂಸ್ಕೃತಿಕ ವಲಯದಲ್ಲಿ ಎಲ್ಲ ಪ್ರಜೆಗಳೂ ಸಮಾನವಾಗಿ ಹೊಣೆಯನ್ನು ಹೊರುವಂತಾಗಬೇಕು. ಮಾನವನು ಕೇವಲ ದುಡಿಯುವ ಯಂತ್ರವಲ್ಲ. ಅವನು ಸಂಘಜೀವಿ, ಜೈವಿಕ ಶಕ್ತಿ ಆಗಿರುತ್ತಾನೆ. ಈ ಎಲ್ಲ ಮೂಲಭೂತ ಸೌಕರ್ಯವಿದ್ದಲ್ಲಿ ಮಾತ್ರ ಅವನು ತನ್ನ ಹಕ್ಕುಗಳನ್ನು ಪಡೆದು ಆತ್ಮಾನಂದವನ್ನು ಹೊಂದುತ್ತಾನೆ. ಇದಕ್ಕೆ ಸರ್ಕಾರ ಪೂರ್ವಸಿದ್ಧತಾ ಯೋಜನೆಯನ್ನು ಹಮ್ಮಿಕೊಂಡು ಪ್ರಗತಿಪರ ರೀತಿಯಲ್ಲಿ ನಿರ್ವಹಿಸಬೇಕು. ಆಗ ಜನತೆ ಉನ್ನತ ಮಟ್ಟದ ಸಂಸ್ಕೃತಿ ಪಡೆದು ಉತ್ತಮ ನಾಗರಿಕರಾಗುತ್ತಾರೆ.

**ಸಾಮರಸ್ಯ ಸಂಬಂಧಗಳು**

ಸರ್ಕಾರದ ನೀತಿಯು ಮಾನವನ ಹಕ್ಕುಗಳಿಗೆ ಧಕ್ಕೆ ಬರದಂತೆ ಇರಬೇಕು ಮತ್ತು ಅವನ ಸ್ವಾತಂತ್ರ್ಯವನ್ನು ಹತ್ತಿಕ್ಕುವಂತಿರಬಾರದು. ಜನತೆ ಮತ್ತು ಸರ್ಕಾರದ ನಡುವೆ ಸಾಮರಸ್ಯವುಂಟಾಗಬೇಕು. ಸರ್ಕಾರ ಮಾನವೀಯ ಸಿದ್ಧಾಂತ–ಸಮಸ್ತರ ಅತ್ಯಧಿಕ ಹಿತವನ್ನು ಸಾಧಿಸುವತ್ತ ಗಮನ ಹರಿಸಬೇಕು. ಇದೇ ತತ್ವದ ಆಧಾರದ ಮೇಲೆ ಸರ್ಕಾರವು ಎಲ್ಲ ಜನಗಳೂ ತಮ್ಮ ಹಕ್ಕುಗಳನ್ನು ಚಲಾಯಿಸಿ, ಎಲ್ಲ ಅಂಗಗಳಲ್ಲಿಯೂ ಬಾಧ್ಯತೆಗಳನ್ನು ನಿರ್ವಹಿಸುವಂತೆ ಮಾಡಬೇಕಾಗುತ್ತದೆ.



**ಸ್ವರೂಪ ಮತ್ತು ಸಂಸ್ಥೆ:**

ಸರ್ಕಾರವು ಉದ್ದೇಶಿತ ಗುರಿಗಳನ್ನು ಸಾಧಿಸಲು ಅಧಿಕಾರವನ್ನು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಎಂಬ ಮೂರು ವಿಭಾಗಗಳನ್ನಾಗಿ ವಿಭಜಿಸಿ ಕಾರ್ಯ ನಿರ್ವಹಣೆ ಮಾಡುತ್ತದೆ. ಅದಕ್ಕೆ ಸರಿಯಾದ ನೆಲೆಗಟ್ಟಿರಬೇಕಾದರೆ ಐತಿಹಾಸಿಕ ಹಿನ್ನೆಲೆ ಮತ್ತು ಹಿಂದಿನ ಸರ್ಕಾರಗಳ ಅಧ್ಯಯನ ಮಾಡುವುದೊಳಿತು. ಆದರೂ ಸರಿಯಾದ ಆಡಳಿತ ನಿರ್ವಹಣೆಗೆ ಸಕಾರಾತ್ಮಕವಾದ, ನೈತಿಕ ಮತ್ತು ಮಾನವೀಯ ಮೌಲ್ಯಗಳಿಂದ ಕೂಡಿದ ನಾಗರೀಕರ ಪ್ರಗತಿಪರ ಕಾನೂನನ್ನು ರಚಿಸಬೇಕಾದರೆ ಸಾರ್ವಜನಿಕ ಆಡಳಿತವು ಜನರೊಡನೆ ಸಂಪರ್ಕ ಹೊಂದಿ ದೈನಂದಿನ ಸಾಮಾಜಿಕ ಸಮಸ್ಯೆಗಳ ಬಗ್ಗೆ ಕಳಕಳಿಯನ್ನು ಹೊಂದಿರಬೇಕು. ಆಗ ಜನರೂ ಕೂಡ ಸರ್ಕಾರದ ಜನರ ಕಲ್ಯಾಣ ಸಾಧಿಸುವ ಗುರಿಯಲ್ಲಿ ಸಮನ್ವಯದಿಂದ ಸಹಕಾರ ನೀಡಬಲ್ಲರು. ಈ ನಿಟ್ಟಿನಲ್ಲಿ ಕಾರ್ಯಾಂಗದ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಜನರಿಗೆ ಅಗತ್ಯ ಸೇವೆಯನ್ನು ಒದಗಿಸಬೇಕಾದರೆ ಜನರೊಡನೆ ನೇರ ಸಂಪರ್ಕವಿಟ್ಟುಕೊಂಡು ಅವರ ಸಮಸ್ಯೆಗೆ ಸ್ಪಂದಿಸಿ ಅಗತ್ಯ ಬಿದ್ದಾಗ ಸಾರ್ವಜನಿಕ ಸಭೆ ಸೇರಿಸಿ ಅಥವಾ ಮಾಧ್ಯಮಗಳ ಮೂಲಕ ಕುಂದುಕೊರತೆಯನ್ನು ನಿವಾರಿಸಿ ಜನರ ಹಕ್ಕನ್ನು ಮತ್ತು ವ್ಯಕ್ತಿ ಸ್ವಾತಂತ್ರ್ಯವನ್ನು ಕಾಪಾಡಬೇಕು. ಕೆಲವೊಮ್ಮೆ ಈ ಸರ್ಕಾರಗಳು ಸಾರ್ವಜನಿಕರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ವಿಫಲರಾಗಬಹುದು. ಆಗ ಸಮಾಜ ತನ್ನ ಸಂಘ–ಸಂಸ್ಥೆಗಳ ಮೂಲಕ ಸಮಸ್ಯೆಗಳ ವಿರುದ್ಧ ಹೋರಾಡಿ ಸರ್ಕಾರಕ್ಕೆ ಮನವರಿಕೆ ಮಾಡಿದಾಗ ತಕ್ಕ ಪರಿಹಾರ ಕೈಗೊಳ್ಳಲು ಅನುಕೂಲವಾಗುತ್ತದೆ. ಒಟ್ಟಿನಲ್ಲಿ ಕಾರ್ಯರಚನೆಯು ಜನರ ರಕ್ಷಣೆ, ಶಿಕ್ಷಣ, ಆರೋಗ್ಯ, ಸಾಮಾಜಿಕ ಭದ್ರತೆ, ಕಾನೂನು ಸುವ್ಯವಸ್ಥೆ ಮುಂತಾದ ಉದ್ದೇಶಗಳ ಸಾಧನೆಗಾಗಿ ಸಮಿತಿಯನ್ನು ರಚಿಸಿದಾಗ ಸರಿಯಾಗಿ ಕಾರ್ಯ ನಿರ್ವಹಿಸಲು ಅವಕಾಶ ಉಂಟಾಗುತ್ತದೆ. ಇದಕ್ಕೆ ಪರಿಣಿತರ ಸಲಹೆಗಳೂ ಉಪಯುಕ್ತವಾಗುತ್ತವೆ.

**ಕಾನೂನು ಮತ್ತು ಜಾಗೃತಿ**

ಸರ್ಕಾರ ಮತ್ತು ನಾಗರಿಕರ ನಡುವೆ ಸಾಮರಸ್ಯವಿದ್ದರೂ ಕೆಲವೊಮ್ಮೆ ಮಾನವನ ಸಹಜ ಸ್ವಭಾವವಾದ ದುರಾಸೆ, ಮತ್ಸರ ಇಂತಹ ದುರ್ಗುಣಗಳಿಂದ ಅವನು ಇನ್ನೊಬ್ಬರ ಹಕ್ಕನ್ನು ಕಸಿದುಕೊಳ್ಳುವುದು ಅಥವಾ ಕೇಡನ್ನುಂಟುಮಾಡುವ ಸಂದರ್ಭದಲ್ಲಿ ಅದನ್ನು ಸರಿಪಡಿಸಲು ಕಾನೂನನ್ನು ಹೇರಲೇಬೇಕು. ಸರ್ಕಾರವು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಸೂಕ್ತವಾದ ಬದಲಾವಣೆಗಳನ್ನು ತಂದು ಸಮಾಜದಲ್ಲಿ ಲೋಪವನ್ನು ಸರಿಪಡಿಸಬೇಕು. ನ್ಯಾಯಾಂಗದಲ್ಲಿ ಪ್ರತಿಯೊಬ್ಬರೂ ತನ್ನ ಜವಾಬ್ದಾರಿಯನ್ನು ಕಟ್ಟುನಿಟ್ಟಾಗಿ ಪಾಲಿಸಿ ಇನ್ನೊಬ್ಬರ ಕರ್ತವ್ಯಕ್ಕೆ

ತಡೆಯೊಡ್ಡಬಾರದು. ಮಾನವನ ಸುಖಕ್ಕೆ ವಿರುದ್ಧವಾದ ಕಾಯಿದೆಗಳು ಕಾಯಿದೆಗಳೇ ಅಲ್ಲ. ಬಲಾತ್ಕಾರವಾಗಿ ಒಂದು ವೇಳೆ ಕಾನೂನನ್ನು ಹೇರಿದ್ದೇ ಆದಲ್ಲಿ, ಅವು ಹೆಚ್ಚು ಕಾಲ ಉಳಿಯಲಾರವು. ಕಾನೂನಿನ ಗುರಿ ಜನರ ಹಿತಾಸಕ್ತಿ ಕಾಪಾಡುವುದರ ಜೊತೆಗೆ ಭದ್ರತೆ ಮತ್ತು ಸಮಾನತೆಯನ್ನೊಳಗೊಂಡಿರಬೇಕು. ಮತ್ತು ಜನರ ಅಧಿಕ ಸುಖವನ್ನು ಎತ್ತಿ ಹಿಡಿಯಬೇಕು. ಸಮಾಜದಲ್ಲಿ ಸಮಾನತೆ ಮತ್ತು ಪ್ರಗತಿಯ ದೃಷ್ಟಿಯಿಂದ ಇದು ಅಗತ್ಯ.

**ಸಾರ್ವಜನಿಕ ಜೀವನದಲ್ಲಿ ಪಾಲ್ಗೊಳ್ಳುವಿಕೆ**

ತಮ್ಮ ಘನತೆಗೆ ತಕ್ಕಂತೆ ಜನಗಳು ಸರ್ಕಾರದ ಕಾರ್ಯಗಳಲ್ಲಿ ಪಾಲುಗೊಳ್ಳಬೇಕು. ಅವರು ಯಾವ ರೀತಿ ಪಾಲುಗೊಳ್ಳುತ್ತಾರೆ ಎನ್ನುವುದು, ಆ ರಾಜಕೀಯ ವ್ಯವಸ್ಥೆಯು ಎಷ್ಟರ ಮಟ್ಟಿಗೆ ಅಭಿವೃದ್ಧಿಯಾಗಿದೆ ಎಂಬುದರ ಮೇಲೆ ಆಧಾರಿತವಾಗುತ್ತದೆ. ಕರ್ತವ್ಯದ ಜೊತೆ ಆತ್ಮತೃಪ್ತಿಯನ್ನೂ ಸಾಧಿಸಬೇಕು. ಅಂತೆಯೇ ಜಗತ್ತಿನ ಏಳ್ಗೆಗಾಗಿ ಸಮಾಜದ ಒಳಿತಿಗಾಗಿ ಶ್ರಮಿಸಿ ಬಹು ಜನರಿಗೆ ಲಾಭವಾಗಬೇಕು. ಸರ್ಕಾರ ತನ್ನ ಆಡಳಿತ ವ್ಯವಸ್ಥೆಯಲ್ಲಿ ಜವಾಬ್ದಾರಿ ವಹಿಸಿ ಉತ್ತಮವಾಗಿ ಕಾರ್ಯ ನಿರ್ವಹಿಸಬೇಕು. ಜನ ಸಂಘಟನೆಯಲ್ಲಿ ಹೆಚ್ಚು ಹೆಚ್ಚು ಪಾಲ್ಗೊಂಡು ಪ್ರಚಲಿತ ಅವಶ್ಯಕತೆ ಮತ್ತು ಜನತೆಯ ಸಮಸ್ಯೆಗಳನ್ನರಿತು ನಿರ್ವಹಣಾ ತಂತ್ರವನ್ನು ಉಪಯೋಗಿಸಿದಾಗ ಮಾತ್ರ ಸಾರ್ವತ್ರಿಕ ಪ್ರಗತಿ ಸಾಧ್ಯವಾಗುತ್ತದೆ. ಪ್ರಕೃತಿಯ ಕೊಡುಗೆಯಾದ ಎಲ್ಲ ಸಾಧನ ಸಂಪತ್ತನ್ನು ಸಮಾಜದ ಸದ್ವಿನಿಯೋಗಕ್ಕೆ ಬಳಸಬೇಕು. ನಮ್ಮ ಅಭಿವೃದ್ಧಿಗೆ ಸಮಾಜದ ಕೊಡುಗೆ ಇದ್ದೇ ಇರುತ್ತದೆ. ಅಂತೆಯೇ ನಾವು ಸಮಾಜದ ಋಣವನ್ನು ತೀರಿಸಲು ಸಮಾಜಸೇವೆ ಮಾಡಬೇಕು. ಬಹುಜನರ ಒಳಿತಿಗಾಗಿ ಶ್ರಮಿಸಬೇಕು. ಆಗ ನಮ್ಮ ಜೀವನ ಸಾರ್ಥಕವಾಗುವುದು. ಮಂತ್ರಿಗಳು ನಿಯಮಿತ ವರ್ಷಗಳು ಮಾತ್ರ ಕಾರ್ಯ ನಿರ್ವಹಿಸುತ್ತಾರೆ. ಆದುದರಿಂದ ಅವರು ನಿಸ್ಸಾರರಾಗುವುದು ತಪ್ಪುತ್ತದೆ. ಸಾಮಾಜಿಕ ಬದಲಾವಣೆಗಳಿಗನುಗುಣವಾಗಿ ಅವರ ಬದಲಿಗೆ ಹೊಸಬರಿಗೆ ಅವಕಾಶವಾಗುತ್ತದೆ.

**ಪ್ರಸ್ತುತ ಸಮಾಜದ ಲಕ್ಷಣಗಳು**

ಪ್ರಸ್ತುತ ನಾಗರೀಕ ಸಮಾಜವು ಪ್ರಜೆಗಳು ಸ್ವತಃ ತೀರ್ಮಾನ ಕೈಗೊಳ್ಳುವಂತೆ ಸ್ವಾತಂತ್ರ್ಯವನ್ನು ಹೊಂದಿದೆ. ಈ ನಿಟ್ಟಿನಲ್ಲಿ ಗಣನೀಯ ಬದಲಾವಣೆಗಳಾಗಿದೆ. ಆಯಾ ಸರ್ಕಾರಗಳು ತಮ್ಮ ದೇಶದ ರಾಜಕೀಯ ಮತ್ತು ಸಾಮಾಜಿಕ ಸ್ಥಿತಿಗನುಸಾರವಾಗಿ ಆಡಳಿತಕ್ಕೆ ಅನುಕೂಲವಾಗುವಂತಹ ಸಂವಿಧಾನಗಳನ್ನು ರಚಿಸಿವೆ. ಈ ಸಂವಿಧಾನದಲ್ಲಿ ಅಳವಡಿಸಿರುವ ಆಡಳಿತ ತತ್ವದ ಆಧಾರದಲ್ಲಿ ಅಧಿಕಾರಗಳು



ಪ್ರಾದೇಶಿಕ ನೀತಿಯ ಮೇರೆಗೆ ವಿತರಿಸಲ್ಪಟ್ಟಿವೆ. ಇವು ಮಾನವನ ಹಕ್ಕುಗಳನ್ನು ರಕ್ಷಿಸುವುದರ ಜೊತೆಗೆ ಕರ್ತವ್ಯಗಳನ್ನು ಒಳಗೊಂಡಿವೆ. ಹೀಗೆ ಈ ಸುಧಾರಿತ ಜಗತ್ತಿನಲ್ಲಿ ಪ್ರತಿಯೊಂದು ರಾಜ್ಯವೂ ಸ್ವತಂತ್ರವಾಗಿ ಸಂವಿಧಾನದ ಅಥವಾ ಸರ್ಕಾರದ ಕಾನೂನಿನಡಿಯಲ್ಲಿ ಪರಮಾಧಿಕಾರವನ್ನು ಹೊಂದಿದ್ದು, ಆಯಾ ಕಾಲ ಮತ್ತು ಸಂದರ್ಭಕ್ಕೆ ತಕ್ಕಂತೆ ಬದಲಾವಣೆಗೊಳ್ಳುತ್ತಿದೆ. ಕಾನೂನು ಆಧಾರಿತ ಆಳ್ವಿಕೆಯಲ್ಲಿ ಒಲವು ಜನತೆಯಲ್ಲಿ ಹೆಚ್ಚಾಗಿದೆ. ಆದರೆ ಅದು ಅಹಿಂಸೆಯ ಪಥದಲ್ಲಿದ್ದು, ಯಾರ ಹಕ್ಕನ್ನು ಕಸಿದುಕೊಳ್ಳದೆ ಎಲ್ಲರೂ ಗೌರವದಿಂದ ನೆಲೆಸುತ್ತಿದ್ದಾರೆ.

* * * *

# ೩. ರಾಜ್ಯಗಳ ನಡುವಿನ ಸಂಬಂಧಗಳು

ರಾಜ್ಯಗಳ ನಡುವೆ ಇರುವ ರಾಜಕೀಯ ಸಂಘಟನೆಗಳು ಮತ್ತು ಸರ್ಕಾರಗಳು ಪರಸ್ಪರ ಸಭೆ ಸೇರಿ ವಿಶ್ವದ ಒಳಿತಿಗೆ ಚಿಂತನೆ ನಡೆಸಿ, ರಾಜಕೀಯ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಪ್ರಗತಿ ಮತ್ತು ಮುಖ್ಯವಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಶಾಂತಿಯನ್ನು ಕಾಪಾಡಿಕೊಂಡು ಹೋಗುವ ಬಗ್ಗೆ ಚಿಂತಿಸಿ ಸಾಮರಸ್ಯದಿಂದ ಜಗತ್ತಿನ ಜನರೆಲ್ಲರೂ ಬದುಕುವಂತಹ ವಾತಾವರಣವನ್ನು ನಿರ್ಮಿಸುವುದೇ ಇಂದಿನ ಮುಖ್ಯ ಅಗತ್ಯಗಳಲ್ಲೊಂದಾಗಿದೆ.

ಮಾನವನು ತನ್ನ ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ಕಾಯ್ದುಕೊಳ್ಳಲು ಅಂತರ್ ರಾಜ್ಯಗಳಲ್ಲಿ ಕಾರ್ಯಾತ್ಮಕ ಪ್ರಚೋದನೆಯನ್ನು ನೀಡಬೇಕು. ಸರ್ಕಾರ ನಡೆಸುವವರಿಗೆ ಅಥವಾ ಜನರನ್ನಾಳುವವರಿಗೆ ಜಾನ್ ಪೋಪ್ XXIIIರವರ ಸಂದೇಶವೇನೆಂದರೆ "ನಾವು ಯಾವ ವಸ್ತುವನ್ನೇ ಆಗಲಿ, ಮೂಲ ದ್ರವ್ಯದ ಗುಣ ಬೇರ್ಪಡಿಸಿ ಸೃಷ್ಟಿಸುವುದಾಗಲಿ, ನಾಶಪಡಿಸುವುದಾಗಲಿ ಸಾಧ್ಯವಾಗದ ಕೆಲಸ. ದೇವರಿಂದ ಸೃಷ್ಟಿಯಾದ ಈ ಪ್ರಕೃತಿ ಅನೇಕತೆ ಹಾಗೂ ವೈವಿಧ್ಯತೆಗೆ ಕಾರಣೀಭೂತವಾಗಿದೆ. ಆದ್ದರಿಂದಲೇ ಸಮಾಜದಲ್ಲಿ ರಾಜರೇ ಆಗಲಿ, ಅವರು ದೇವರಿಂದ ಅಧಿಕಾರ ಪಡೆದವರಾಗಿರುತ್ತಾರೆ. ಜನರ ಉನ್ನತಿಗಾಗಿ ಕಾರ್ಯ ನಿರ್ವಹಿಸಲು ದೇವರೇ ಅಧಿಕಾರವನ್ನು ನೀಡಿರುವುದರಿಂದ ಅವನು ನೇರವಾಗಿ ದೇವರಿಗೇ ಜವಾಬ್ದಾರಿಯಾಗಿರುತ್ತಾನೆ ಮತ್ತು ಆತ್ಮ ಪರಿಶುದ್ಧಿಯ ಜೊತೆಗೆ ಸಮಾಜ ಸೇವೆಯಲ್ಲಿ ನಿರತರಾಗಿ ಭಗವಂತನನ್ನು ಕಾಣಬಹುದು. ಒಂದು ವೇಳೆ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದೇ ಆದಲ್ಲಿ, ಅವನು ದೇವರಿಂದ ಶಿಕ್ಷೆಗೆ ಗುರಿಯಾಗುವನು."

ಎಲ್ಲಾ ರಾಜಕೀಯ ಸಂಘಟನೆಗಳೂ ದೇವರ ಶಾಸನಕ್ಕೆ ತಲೆ ಬಾಗುವಂತಿರಬೇಕು. ಅಂದರೆ ಯಾರೂ ಬದಲಾಯಿಸಲಾಗದ ನೀತಿಯ ಕಲ್ಲಿನ ನೆಲೆಗಟ್ಟಿನಲ್ಲಿ ಕಟ್ಟಲ್ಪಡಬೇಕು. ಮಾನವನ ಹೃದಯದಲ್ಲಿ ದಯೆ ಮತ್ತು ಮಾನವೀಯತೆಯ ಬೀಜಗಳನ್ನು ಬಿತ್ತಿದವನು ದೇವರೇ. ಹಾಗಾಗಿ ವಿಶ್ವ ಸರ್ಕಾರ ರಚನೆಗೊಂಡು ಜಗತ್ತಿನಲ್ಲಿ ರಚನಾತ್ಮಕ ಕಾರ್ಯಗಳನ್ನು ಹಮ್ಮಿಕೊಂಡು ವಿಶ್ವದಲ್ಲಿ ಶಾಂತಿ ನೆಲೆಸುವ ಕೈಂಕರ್ಯವು ದೇವರ ಸಂಕಲ್ಪವಾಗಿರುತ್ತದೆ.



**ಸತ್ಯ**

ನಿಸರ್ಗ ನಿಯಮದ ಪ್ರಕಾರ ಈ ಜಗತ್ತಿನಲ್ಲಿರುವವರೆಲ್ಲರೂ ಒಂದೇ. ಮಾನವಕುಲವೊಂದೇ. ಇಲ್ಲಿ ಯಾವ ರೀತಿಯ ಬೇಧ ಭಾವವಿಲ್ಲ. ಎಲ್ಲರೂ ದೇವರ ಮಕ್ಕಳು. ಇಲ್ಲಿ ವರ್ಣಭೇದವಾಗಲಿ, ಜಾತಿಯ ಆಧಾರದ ವರ್ಗೀಕರಣವಾಗಲಿ ಇರುವುದಿಲ್ಲ. ಎಲ್ಲರೂ ಅಭಿವೃದ್ಧಿಗಾಗಿ ಶ್ರಮಿಸುತ್ತಾರೆ. ಆದರೆ ಇನ್ನೊಬ್ಬರ ಸ್ವಾತಂತ್ರ್ಯಕ್ಕೆ ಚ್ಯುತಿ ಬಾರದಂತೆ ನಡೆದುಕೊಳ್ಳಬೇಕು. ಹಾಗಾಗಿ ಜನತೆ ಮತ್ತು ರಾಜಕೀಯ ಸಂಘಟನೆಗಳು ಸತ್ಯ, ಸಜ್ಜನಿಕೆ ಮತ್ತು ಸೇವಾಧರ್ಮವನ್ನು ಆಚರಿಸಬೇಕೇ ಹೊರತು, ಅಧಿಕಾರ ವ್ಯಾಮೋಹದಿಂದಲ್ಲ. ಆಡಳಿತ ವರ್ಗ ಕೆಲವೇ ಜನರ ಗುಂಪಾಗಿರುತ್ತದೆ. ಇವರೆಲ್ಲರೂ ವಿಶ್ವದಲ್ಲಿ ಶಾಂತಿ ಮತ್ತು ನ್ಯಾಯ ಸ್ಥಾಪನೆಯ ಉದ್ದೇಶಕ್ಕೆ ತಮ್ಮನ್ನು ಸಮರ್ಪಿಸಿಕೊಳ್ಳಬೇಕಾಗುತ್ತದೆ. ಇತ್ತೀಚೆಗೆ ಎಲ್ಲೆಡೆ ಉನ್ನತ ತಾಂತ್ರಿಕತೆಯ ಪರಿಣಾಮದಿಂದಾಗಿ ಮಾಧ್ಯಮದಲ್ಲಿ ಸಾಕಷ್ಟು ಬದಲಾವಣೆ ಆಗಿರುವುದರಿಂದ ಜಗತ್ತಿನ ಎಲ್ಲ ಕಡೆಯಿಂದ ಆರ್ಥಿಕ ರಾಜಕೀಯ ಮತ್ತು ಸಾಮಾಜಿಕ ಪ್ರಗತಿಯನ್ನು ತಿಳಿಯಬಹುದಾಗಿದೆ. ಉನ್ನತ ಮಟ್ಟದ ಸಂಪರ್ಕ ಸಾಧನದಿಂದ ಪ್ರಸಕ್ತ ವಿಷಯಗಳ ಬಗ್ಗೆ ಅಧ್ಯಯನ ಮಾಡಿ ಸುಧಾರಣಾ ಕ್ರಮಗಳನ್ನು ಕೈಗೊಳ್ಳಬಹುದು.

**ನ್ಯಾಯಪರತೆ**

ರಾಜ್ಯ ಮತ್ತು ಸರ್ಕಾರಗಳನ್ನು ಪ್ರತಿನಿಧಿಸುವವರು, ಪ್ರತಿಯೊಬ್ಬನ ಒಳಿತಿಗೆ ಅಥವಾ ನೆಮ್ಮದಿಗೆ ಶ್ರಮಿಸುವುದಾದಲ್ಲಿ ಮೊದಲು ತಮ್ಮಲ್ಲಿ ಸದ್ಗುಣ, ವಿವೇಕ ಜ್ಞಾನ ಮುಂತಾದ ಗುಣಗಳನ್ನು ಅಳವಡಿಸಿಕೊಳ್ಳಬೇಕು. ಪ್ರತಿಯೊಬ್ಬನಲ್ಲೂ ಒಳ್ಳೆಯದು ಮತ್ತು ಕೆಟ್ಟದ್ದು ಯಾವುದು ಎಂಬ ವಿವೇಚನಾ ಶಕ್ತಿಯಿದ್ದರೂ ತನ್ನ ಮತ್ತು ಕುಟುಂಬದ ಹಿತಚಿಂತನೆಯಲ್ಲೇ ತೊಡಗುವುದರಿಂದ ಕೆಲವೊಮ್ಮೆ ಅವನು ಸ್ವಾರ್ಥಿಯಾಗುತ್ತಾನೆ. ಕೊನೆಯಿಲ್ಲದ ಆಸೆಗಳಿಗೆ ಮರುಳಾಗುವ ಸಾಧ್ಯತೆಯಿರುವುದರಿಂದ ಸಮಾಜಕ್ಕೆ ಕೇಡಾಗುವ ಸಂಭವವಿರುತ್ತದೆ. ಅದಕ್ಕಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ನ್ಯಾಯಾಂಗ ಅತ್ಯವಶ್ಯಕ. ನ್ಯಾಯ ಮತ್ತು ಕಾನೂನಿನ ವ್ಯವಸ್ಥೆಯಿದ್ದಲ್ಲಿ ಸಮಾಜದ ಅಭಿವೃದ್ಧಿ ಮಾನವನ ಹಕ್ಕುಗಳನ್ನು ರಕ್ಷಿಸುವುದು ಸಾಧ್ಯವಾಗಿರುತ್ತದೆ. ರಾಜ್ಯಗಳ ನಡುವೆ ಜನರು ಅನ್ಯೋನ್ಯತೆಯಿಂದ ಬಾಳುವಂತಹ ವಾತಾವರಣಕ್ಕೆ ನ್ಯಾಯಾಂಗಗಳು ಪ್ರಯತ್ನಿಸಬೇಕು. ಮಾನವನ ನೀತಿ ನಿಯಮಗಳೆದುರು ಎಲ್ಲರೂ ಸರಿಸಮಾನರು. ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸಿದಾಗ ಪ್ರತಿಯೊಬ್ಬನಿಗೂ ನ್ಯಾಯಾಲಯದಲ್ಲಿ ನ್ಯಾಯ ದೊರಕುವ ಹಕ್ಕಿದೆ.

**ಅಲ್ಪಸಂಖ್ಯಾತರ ಹಿತಾಸಕ್ತಿ**

ಹತ್ತೊಂಬತ್ತನೆಯ ಶತಮಾನದ ನಂತರದ ಐತಿಹಾಸಿಕ ಇತಿಹಾಸವನ್ನು ಗಮನಿಸಿದಾಗ ಕಂಡುಬರುವ ಅಂಶವೆಂದರೆ ರಾಜ್ಯ ಸರ್ಕಾರಗಳು ಅಲ್ಪಸಂಖ್ಯಾತರ ಹಿತಾಸಕ್ತಿಯ ಕಡೆಗೆ ಗಮನ ಹರಿಸುತ್ತಿರುವುದು ಸ್ವಾಗತಾರ್ಹ ಸಂಗತಿಯಾಗಿರುತ್ತದೆ. ಸಮಾಜದ ಸರ್ವತೋಮುಖ ಪ್ರಗತಿಯಾಗಬೇಕಾದರೆ ಅಲ್ಪಸಂಖ್ಯಾತರ ಒಟ್ಟಾರೆ ಜೀವನಮಟ್ಟವನ್ನು ಸುಧಾರಿಸುವುದು ಮತ್ತು ಅವರಿಗೆ ದೊರಕಬೇಕಾದ ಎಲ್ಲ ಸೌಲಭ್ಯಗಳನ್ನು ಒದಗಿಸಿ ಒಂದು ವೇಳೆ ಬಹುಸಂಖ್ಯಾತರಿಂದ ದೌರ್ಜನ್ಯ ಉಂಟಾದಲ್ಲಿ ನ್ಯಾಯವನ್ನು ಒದಗಿಸಿ ಆರ್ಥಿಕ ಸಾಮಾಜಿಕ ಹಿತಾಸಕ್ತಿಯನ್ನು ಕಾಪಾಡಬೇಕು. ಅವರದ್ದೇ ಆದ ಸನಾತನ ಮೌಲ್ಯಗಳನ್ನು ಹಾಗೂ ಸಂಪ್ರದಾಯಗಳನ್ನು ಆಚರಿಸುವ ಹಕ್ಕನ್ನು ಅವರು ಪಡೆದಿರುತ್ತಾರೆ. ಒಟ್ಟಿನಲ್ಲಿ ಬಹುಸಂಖ್ಯಾತರು ಮತ್ತು ಅಲ್ಪಸಂಖ್ಯಾತರು ಪರಸ್ಪರ ಸಹಕಾರ ಹಾಗೂ ಗೌರವದಿಂದ ಬಾಳಲು ಪೂರಕವಾದ ಸರ್ಕಾರಗಳು ವಿಶ್ವದೆಲ್ಲೆಡೆ ರಚನೆಯಾಗಬೇಕು. ಅಲ್ಪಸಂಖ್ಯಾತರಿಗೆ ತಮ್ಮ ವೈಯಕ್ತಿಕ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವಕಾಶವಿರಬೇಕು. ಇಲ್ಲಿ ವ್ಯಕ್ತಿ ಸ್ವಾತಂತ್ರ್ಯ ಮುಖ್ಯವಾಗಿರುತ್ತದೆ.

**ಒಗ್ಗಟ್ಟು ಅಥವಾ ಏಕತೆ**

ಪ್ರಪಂಚದಲ್ಲಿ ಮಾನವನ ಹಕ್ಕುಗಳಿಗೆ ಗೌರವವನ್ನು ತೋರಬೇಕಾದರೆ ಮೊದಲು ಪ್ರತಿಯೊಂದು ರಾಜ್ಯದ ಅಥವಾ ರಾಷ್ಟ್ರದ ಹಕ್ಕುಗಳು ಸಾರ್ವತ್ರಿಕ ಇಚ್ಛೆಗೆ ಬದ್ಧವಾಗಿರುವುದರಿಂದ ಅವುಗಳನ್ನು ಗೌರವಿಸಬೇಕು. ಇಲ್ಲಿ ಇಡೀ ವಿಶ್ವವೇ ಒಂದು ಸಂಸ್ಥೆ ಅಥವಾ ಸಂಘಗಳ ಸಂಘ. ಅದು ಯಾವುದೇ ಕಾರ್ಯವನ್ನು ನಿರ್ವಹಿಸಬೇಕಾದರೂ ಪರಸ್ಪರ ಅಂತರರಾಷ್ಟ್ರೀಯ ಸಮಿತಿಗಳನ್ನು ರಚಿಸಿ ಎಲ್ಲಾ ರಾಷ್ಟ್ರಗಳಿಂದ ಅನುಭವಿ ಸದಸ್ಯರನ್ನು ಆಯ್ಕೆ ಮಾಡಿ ಕಾರ್ಯರಚನೆಯ ಬಗ್ಗೆ ಚರ್ಚಿಸಿ ತಜ್ಞರ ಅಭಿಪ್ರಾಯದ ಮೇರೆಗೆ ಕಾರ್ಯರೂಪಕ್ಕೆ ತಂದು, ವಿಶ್ವಮಾನವ ಏಳ್ಗೆಗಾಗಿ ಒಗ್ಗಟ್ಟಿನಿಂದ ಸಾಧಿಸಬೇಕು.

ಕೆಲವು ದೇಶಗಳಲ್ಲಿ ಅಸ್ಪೃಶ್ಯತೆ ವಿಶ್ವದ ಶಾಂತಿಗೆ ಚ್ಯುತಿ ತರುವಂಥದ್ದಾಗಿದೆ. ವರ್ಣಭೇದ, ಜಾತೀಯತೆ, ಗುಂಪುಗಾರಿಕೆ ಮುಂತಾದವುಗಳಲ್ಲಿ ಜನರು ನಿರತರಾಗಿರುತ್ತಾರೆ. ಇದರಿಂದ ರಾಷ್ಟ್ರ ರಾಷ್ಟ್ರಗಳ ನಡುವೆ ವಿವಾದ ಸೃಷ್ಟಿಯಾಗಿ ಕೆಲವೊಮ್ಮೆ ಯುದ್ಧ ಸಂಭವಿಸುತ್ತದೆ. ಇಂತಹ ಅಮಾನವೀಯತೆಯನ್ನು ಯಾವ ಧರ್ಮಗ್ರಂಥದಲ್ಲೂ ಉಲ್ಲೇಖಿಸಿಲ್ಲ. ಇದರಿಂದ ಮಾನವನು ದುಃಖ ವೇದನೆಯನ್ನು ಅನುಭವಿಸಬೇಕಾಗುತ್ತದೆ. ಇಸ್ಲಾಂ, ಕ್ರೈಸ್ತ, ಪಾರಸಿ, ಯಹೂದ್ಯ, ಹಿಂದೂ ಹೀಗೆ ಯಾರೇ ಆಗಿರಲಿ, ಎಲ್ಲ ಮಾನವರಲ್ಲಿ ಸೋದರ ಭಾವನೆ ಸ್ಥಾಪನೆಯಾಗಬೇಕು.



ಹೀಗೆ ಎಲ್ಲ ರಾಷ್ಟ್ರಗಳು ಪರಸ್ಪರ ತಮ್ಮ ನಾಗರಿಕತೆಯನ್ನು ಅರ್ಥಮಾಡಿಕೊಂಡು ಪ್ರಪಂಚದ ನಾಗರಿಕತೆ ಮತ್ತು ಸಂಸ್ಕೃತಿಯನ್ನು ಶ್ರೀಮಂತಗೊಳಿಸಬೇಕಾಗಿದೆ. ಇಲ್ಲಿ ಹೋರಾಟ ಬೇಡ, ಪರಸ್ಪರ ಸಹಕಾರ ಬೇಕು. ಈ ಜಗತ್ತೆಲ್ಲವೂ ಪರಮಾತ್ಮನ ಉಪಕ್ರಮಣಿಕೆ; ಇಲ್ಲಿ ಅಸೂಯೆ ಸಲ್ಲದು.

**ಸಮಾನತೆ**

ನೈಸರ್ಗಿಕ ಸಂಪತ್ತು ಪ್ರಪಂಚದೆಲ್ಲೆಡೆ ಒಂದೇ ಪ್ರಮಾಣದಲ್ಲಿ ದೊರಕುವುದಿಲ್ಲ. ಜಗತ್ತಿನ ವಿವಿಧ ರಾಷ್ಟ್ರಗಳ ನಡುವೆ ಸಂಪನ್ಮೂಲಗಳು ಅಸಮಾನತೆಯಲ್ಲಿರುವುದರಿಂದ ಮತ್ತು ವಿರಳವಾಗಿರುವುದರಿಂದ ಅವುಗಳನ್ನು ಸಮರ್ಪಕ ರೀತಿಯಲ್ಲಿ ಬಂಡವಾಳ ಸಂಗ್ರಹಿಸಿ ಮತ್ತು ಮಾನವ ಸಂಪನ್ಮೂಲ ವಿನಿಯೋಗಿಸಿ ಉತ್ಪಾದನೆಯನ್ನು ಹೆಚ್ಚಿಸುವುದರಿಂದ ಎಲ್ಲ ರಾಷ್ಟ್ರಗಳಲ್ಲಿ ಆರ್ಥಿಕ ಸಮಾನತೆಯನ್ನು ಕಾಪಾಡಿಕೊಳ್ಳಬೇಕು. ಇದು ವಿಶ್ವ ಸಮಿತಿಯ ಕರ್ತವ್ಯವಾಗಿರುತ್ತದೆ. ಆರ್ಥಿಕ ಸಮಾನತೆ ವಿಶ್ವಶಾಂತಿಗೆ ಪೂರಕವಾಗಿರುತ್ತದೆ. ಸಾಧ್ಯವಾದಷ್ಟು ಮಟ್ಟಿಗೆ ಕೆಲಸಗಾರರ ಹತ್ತಿರಕ್ಕೆ ಕೆಲಸ ಹೋಗುವಂತೆ ಮಾಡಬೇಕೇ ಹೊರತು, ಹಿಂದು ಮುಂದಾಗಿ ಅಲ್ಲ. ಇದರಿಂದಾಗಿ ತಾವು ಇದ್ದ ವಾತಾವರಣವನ್ನು ಬಿಟ್ಟು ಹೊರಗಡೆಗೆ ಹೋಗಿ ಅಲ್ಲಿ ಮನೆಯನ್ನು ಅಳವಡಿಸಿಕೊಳ್ಳುವ ಕಷ್ಟ ಒದಗಬಾರದು. ಇದರಿಂದ ಒಬ್ಬರನ್ನೊಬ್ಬರು ಅಗಲುವಿಕೆ ಉಂಟಾಗುವುದರ ಜೊತೆಗೆ ಹೊಸ ವಾತಾವರಣಕ್ಕೆ ಹೊಂದಿಕೊಳ್ಳುವ ಹಾಗೂ ಸಾಮಾಜಿಕ ಸಾಮರಸ್ಯ ಉಂಟಾಗುವ ಕಷ್ಟವನ್ನು ತಪ್ಪಿಸಬಹುದು.

**ರಾಜಕೀಯ ನಿರಾಶ್ರಿತರು**

ಇತಿಹಾಸವನ್ನು ಅವಲೋಕಿಸಿದಾಗ ಕಾಲಕ್ಕೆ ತಕ್ಕಂತೆ ಬದಲಾವಣೆಗೊಳ್ಳುತ್ತಿದೆ ಎಂದು ತಿಳಿಯುತ್ತದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರತಿಯೊಂದು ರಾಜ್ಯವೂ ಸ್ವತಂತ್ರವಾಗಿದ್ದು ತಮ್ಮ ಸ್ವಂತಿಕೆ ಮತ್ತು ಪರಮಾಧಿಕಾರ ಹೊಂದಿವೆ. ಆದರೂ ಸರ್ಕಾರದ ಆಡಳಿತ ಮಂಡಳಿಯ ಅಧಿಕಾರಿಗಳು ಚಂಚಲ ಸ್ವಭಾವ ಹಾಗೂ ಸ್ವಾರ್ಥತೆಯಿಂದ ಕೂಡಿದ ವ್ಯಕ್ತಿ ಅಥವಾ ಗುಂಪುಗಳಿಗೆ ಸೇರಿರುವುದರಿಂದ ಪರಸ್ಪರ ರಾಷ್ಟ್ರಗಳಲ್ಲಿ ಬಿಕ್ಕಟ್ಟು ತಲೆದೋರಿ ಯುದ್ಧಕ್ಕೆಡೆಮಾಡಿಕೊಡುತ್ತವೆ. ಆಗ ದೇಶದಿಂದ ವಿಸರ್ಜಿಸಲ್ಪಟ್ಟ ನಿರಾಶ್ರಿತರಿಗೆ ಪುನರ್ವಸತಿ ಮತ್ತು ಭದ್ರತೆ ಕಲ್ಪಿಸಿ ಅವರಿಗೆ ದೊರೆಯಬೇಕಾದ ಎಲ್ಲ ಸೌಕರ್ಯಗಳನ್ನು ಸರ್ಕಾರಗಳು ಒದಗಿಸಬೇಕು. ವಿಶ್ವದಾದ್ಯಂತ ಜಾತಿ, ಮತ, ಲಿಂಗ ಭಾಷೆ ಮುಂತಾದ ಭೇದ ಭಾವವಿಲ್ಲದಂತೆ ಬದುಕಬೇಕು. ಆದುದರಿಂದ ಮಾನವೀಯ ಮೌಲ್ಯಗಳ ಆಧಾರದ ಮೇಲೆ ಕಾರ್ಯ ನಿರ್ವಹಿಸುವ ಕ್ರೈಸ್ತ ಸಂಸ್ಥೆಗಳು ಒಂದು ದೇಶದಿಂದ ಇನ್ನೊಂದು ದೇಶಕ್ಕೆ

ನಿರಾಶ್ರಿತರಾಗಿ ಹೋದವರ ದುಃಖವನ್ನು ಕಡಿಮೆ ಮಾಡಲು ಪ್ರಯತ್ನಿಸುವವರನ್ನು ನಾನು ಈ ಸಂದರ್ಭದಲ್ಲಿ ಸಾರ್ವಜನಿಕವಾಗಿ ಒಪ್ಪಿಕೊಳ್ಳುತ್ತೇನೆ. ಇಂತಹ ಸೂಕ್ಷ್ಮ ವಿಷಯದಲ್ಲಿ ಪರಿಣತಿಯನ್ನು ಹೊಂದಿರುವ, ಅಂತರರಾಷ್ಟ್ರೀಯ ಸಂಸ್ಥೆಗಳು ಮತ್ತು ಸರಿಯಾದ ತಿಳುವಳಿಕೆ ಇರುವ ಜನಗಳಿಗೆ ಕೆಲಸ ಮಾಡಲು ಅವಕಾಶ ನೀಡಬೇಕು.

## ನಿಶ್ಶಸ್ತ್ರೀಕರಣ

ವಿಶ್ವಶಾಂತಿಗೆ ಅಡೆತಡೆಯನ್ನುಂಟುಮಾಡುವ ಮತ್ತೊಂದು ಅಂಶವೆಂದರೆ ಯುದ್ಧ ವಿಮಾನ ಹಾಗೂ ಯುದ್ಧ ಸಾಮಗ್ರಿಗಳ ತಯಾರಿಕೆ. ಇತ್ತೀಚೆಗೆ ಹೆಚ್ಚಾಗಿ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ತಯಾರಾಗುತ್ತಿರುವ ಶಸ್ತ್ರಸಾಮಗ್ರಿಗಳು ಹೆಚ್ಚಾಗಿವೆ. ಇದು ಅತ್ಯಂತ ಶೋಚನೀಯ ಸಂಗತಿಯಾಗಿದೆ. ಯುದ್ಧದಿಂದ ಯಾವುದೇ ಸಮಸ್ಯೆ ಬಗೆಹರಿಯದು. ಯುದ್ಧ ಭೀತಿಯಿಂದ ಜನರು ನೆಮ್ಮದಿಯಿಂದ ಬದುಕಲು ಸಾಧ್ಯವಿಲ್ಲ. ಯುದ್ಧ ಸಾಮಗ್ರಿಗಳ ಉತ್ಪಾದನೆ ರಾಷ್ಟ್ರದ ಪ್ರಗತಿಯ ಸಂಕೇತವಲ್ಲ. ಯುದ್ಧದ ಪರಿಣಾಮ ಮಾನವ ಕುಲವೇ ಅಹಿಂಸೆಯಲ್ಲಿ ನರಳುವಂತೆ ಮಾಡಿ ನೆಮ್ಮದಿಯನ್ನು ಹಾಳು ಮಾಡುತ್ತದೆ. ಆದ್ದರಿಂದ ವಿಶ್ವದ ಎಲ್ಲಾ ರಾಷ್ಟ್ರಗಳು ಯುದ್ಧ ಸಾಮಗ್ರಿಗಳ ಉತ್ಪಾದನೆಯನ್ನೇ ನಿಲ್ಲಿಸಿ, ವಿಶ್ವದ ಜನತೆಯ ಜೀವನವನ್ನು ಉತ್ತಮಗೊಳಿಸುವ ಯೋಜನೆಗಳನ್ನು ಹಮ್ಮಿಕೊಳ್ಳಬೇಕು. ಸಮಾಜದಲ್ಲಿರುವ ಅನಕ್ಷರತೆಯನ್ನು ತೊಡೆದುಹಾಕಲು ಸಾಕ್ಷರತೆಯ ಕಾರ್ಯವನ್ನು ವಿಸ್ತರಿಸಬೇಕು. ಆರ್ಥಿಕ ಅಭಿವೃದ್ಧಿ ಸಾಧಿಸಲು ಮಾನವ ಸಂಪನ್ಮೂಲ ತರಬೇತಿ ತಂತ್ರಜ್ಞಾನದ ವರ್ಗಾವಣೆಯನ್ನು ಮುಂದುವರಿದ ದೇಶಗಳು ಹಿಂದುಳಿದ ದೇಶಗಳಿಗೆ ಮಾಡಿದಾಗ ಅದರ ಪ್ರಯೋಜನ ಎಲ್ಲ ರಾಷ್ಟ್ರಗಳಿಗೆ ದೊರೆತು ಮುಂದುವರಿಯಲು ಅನುಕೂಲವಾಗುತ್ತದೆ. ಆಯಾ ರಾಷ್ಟ್ರಗಳಲ್ಲಿ ದೊರಕುವಂತಹ ಸ್ವಾಭಾವಿಕ ಸಂಪನ್ಮೂಲಗಳನ್ನು ಗುರುತಿಸಿ, ಅವುಗಳ ಗರಿಷ್ಠ ಉಪಯೋಗವಾಗಿ ಜನ ಸಮುದಾಯದ ಅತ್ಯಂತ ಬಡ ಜನರ ಅವಶ್ಯಕತೆಗಳನ್ನು ಪೂರೈಸುವ ನಿಟ್ಟಿನಲ್ಲಿ ಆರ್ಥಿಕ ಅಭಿವೃದ್ಧಿಯುಂಟಾಗಿ ವಿಶ್ವದಲ್ಲೇ ಆರ್ಥಿಕ, ಸಾಮಾಜಿಕ ಸಮಾನತೆ ಉಂಟಾಗುತ್ತದೆ. ಅದಕ್ಕೆ ಬದಲಾಗಿ ಹೆಚ್ಚು ಹೆಚ್ಚು ಯುದ್ಧ ಸಾಮಗ್ರಿಗಳನ್ನು ಉತ್ಪಾದಿಸಲು ರಾಷ್ಟ್ರಗಳು ಪ್ರಚೋದಿಸಿದಲ್ಲಿ ಯುದ್ಧಕ್ಕೆ ಆಹ್ವಾನ ನೀಡಿದಂತೆ. ಆಗ ಶಾಂತಿ ಅಸಾಧ್ಯವಾದ ಮಾತು. ನಮ್ಮ ಪೂರ್ವಾಧಿಕಾರಿಗಳಾಗಿದ್ದ ಪೂಜ್ಯ ಸ್ಮರಣೆಯ ಪಿಯಸ್ ೧೨ ಅವರು ಹೀಗೆ ಹೇಳಿದ್ದಾರೆ. ‘‘ಆರ್ಥಿಕ ವುತ್ತು ಸಾವಾಜಿಕ ನಾಶವನ್ನುಂಟುಮಾಡುವ ಅದರ ಜೊತೆಗೆ ಉಂಟಾಗುವ ಮಾನವೀಯ ಮೌಲ್ಯಗಳ



ಅಧಃಪತವು ಮೂರನೆಯ ಬಾರಿಗೆ ಉಂಟಾಗುವುದಕ್ಕೆ ನಾವು ಅವಕಾಶ ಮಾಡಿಕೊಡಬಾರದು.”

ವಿಶ್ವರಾಷ್ಟ್ರಗಳು ಒಂದುಗೂಡಿ ಯುದ್ಧವನ್ನು ತಪ್ಪಿಸಲು ನಿಶ್ಶಸ್ತ್ರೀಕರಣ ಗೊಳಿಸುವುದೊಂದೇ ದಾರಿಯಾಗಿರುತ್ತದೆ. ಶಾಂತಿಯನ್ನು ಕಾಪಾಡಿದಾಗ ಮಾತ್ರ ಜನರು ಸುಖದಲ್ಲಿರುತ್ತಾರೆ. ಅಣುಶಕ್ತಿ ಸಮರದ ಬದಲು ಅದೇ ಶಕ್ತಿಯನ್ನು ಆರ್ಥಿಕ ಕ್ಷೇತ್ರದಲ್ಲಿ ಬಳಸಿ ಉತ್ಪಾದನೆಯನ್ನು ಹೆಚ್ಚಿಸಬೇಕು. ಪೂಜ್ಯ ಪಿಯಸ್ ೧೨ ಅವರು ಹೇಳಿರುವ ಮಾತು ನಮ್ಮ ಕಿವಿಯಲ್ಲಿ ಗುಂಯ್‌ಗುಡುತ್ತಿದೆ. “ಶಾಂತಿಯಿಂದ ಏನೂ ಹಾಳಾಗುವುದಿಲ್ಲ. ಆದರೆ ಯುದ್ಧದಿಂದ ಎಲ್ಲವೂ ನಾಶವಾಗುತ್ತದೆ. ಕೆಲವು ಪ್ರಮುಖವಾದ ಸಮಸ್ಯೆಗಳ ಬಗ್ಗೆ ಚರ್ಚಿಸುವ ಮತ್ತು ನಿರ್ಣಯಗಳನ್ನು ಕೈಗೊಳ್ಳುವ ಹಕ್ಕು ಪ್ರತಿಯೊಬ್ಬ ಪ್ರಜೆಗಿರುತ್ತದೆ. ಹಾಗಾಗಿ ಪ್ರಪಂಚದ ಎಲ್ಲಾ ರಾಷ್ಟ್ರಗಳೂ ತಜ್ಞರ ಸಮಿತಿಯನ್ನು ರಚಿಸಿ, ಸಹಕಾರವನ್ನು ವೃದ್ಧಿಸುವ ಹಾದಿಯಲ್ಲಿ ನಿಶ್ಶಸ್ತ್ರೀಕರಣದ ಬಗ್ಗೆ ಶಿಫಾರಸ್ಸು ಮಾಡಬೇಕು ಮತ್ತು ಜನತೆ ಹಾಗೂ ಬೆಂಬಲದೊಂದಿಗೆ ವಿಶ್ವಶಾಂತಿಯನ್ನು ಕಾಪಾಡಬೇಕು. ನಾವು ದೇವರಿಗೆ ಪ್ರಾರ್ಥನೆ ಮಾಡಿ ನಮ್ಮ ಈ ಎಲ್ಲ ಕೆಲಸಗಳೂ ಸಫಲವಾಗಲಿ ಎಂದು ದೇವರು ನಮ್ಮನ್ನು ಆಶೀರ್ವದಿಸಲಿ ಎಂದು ನಮ್ಮ ಪರವಾಗಿ ಬೇಡುತ್ತೇವೆ.

## ಸ್ವಾತಂತ್ರ್ಯ

ರಾಷ್ಟ್ರಗಳ ನಡುವಿನ ಅನ್ಯೋನ್ಯ ಸಂಬಂಧಗಳು ಕೂಡ ಮುಕ್ತವಾಗಿ ವಿಚಾರಗಳನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯದ ನೆಲೆಗಟ್ಟಿನಲ್ಲಿರುತ್ತವೆ. ಯಾಕೆಂದರೆ ಎಲ್ಲರೂ ದೇವರು ಸೃಷ್ಟಿಸಿದ ಈ ಭೂಲೋಕದಲ್ಲಿ ದೇವರಿಗೆ ವಿಧೇಯರಾಗಿ ಇರುವುದರಿಂದ ಇಲ್ಲಿ ಭೇದ ಭಾವದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಇದಕ್ಕೆ ಬದಲಾಗಿ ಇನ್ನೊಬ್ಬರಲ್ಲಿ ದೃಢತೆ, ಕಾರ್ಯಶೀಲತೆಯಿಂದ ಅಭಿವೃದ್ಧಿಯಾಗುವಂತೆ ಮಾಡುವುದರಲ್ಲಿ ಮೊದಲಿಗರಾಗಿರಬೇಕು.

ಜಗತ್ತಿನ ಕೆಲವು ದೇಶಗಳು ನಿಸರ್ಗದ ಸಂಪನ್ಮೂಲದ ವಿತರಣೆಯ ವೈವಿಧ್ಯದಿಂದ ಆರ್ಥಿಕವಾಗಿ ಹಿಂದುಳಿದಿರಬಹುದು. ಆದಕಾರಣ ಮುಂದುವರಿದ ದೇಶಗಳು ಹಿಂದುಳಿದ ದೇಶಗಳನ್ನು ತುಳಿಯಬಾರದು. ಎಲ್ಲಾ ರಾಷ್ಟ್ರಗಳಲ್ಲೂ ಆಯಾ ಸಂದರ್ಭಕ್ಕೆ ಜನತೆಯ ಅಭಿಪ್ರಾಯ ಮತ್ತು ಜೀವನಗಳಿಗೆ ಹೊಂದಿಕೊಳ್ಳುವಂತೆ ಕಾನೂನುಗಳು ಮತ್ತು ಹಕ್ಕುಗಳಿರುತ್ತವೆ. ಎಲ್ಲರೂ ಸಮಾನ ಹಕ್ಕು ಗೌರವಗಳನ್ನು ಪಡೆದಿರುತ್ತಾರೆ. ಮಾನವನ ಹಕ್ಕು ಸ್ವಾತಂತ್ರ್ಯವನ್ನು ಹತ್ತಿಕ್ಕುವ ಚಟುವಟಿಕೆಗಳು ವಿಶ್ವರಾಜ್ಯಗಳ ಸಂಘಟನೆಯಲ್ಲಿರಕೂಡದು. ನಮ್ಮ ಪೂರ್ವಾಧಿಕಾರಿಗಳಾದ ಪಿಯಸ್

೧೨ ಅವರು ತಿಳಿಸಿರುವಂತೆ, ಮಾನವೀಯ ಮೌಲ್ಯಗಳ ಆಧಾರದ ಮೇಲೆ ಹೊಸ ಬದಲಾವಣೆಗಳು ಆಗಬೇಕು; ಸ್ವಾತಂತ್ರ್ಯಹರಣಕ್ಕೆ ಆಸ್ಪದವಿರಬಾರದು, ರಾಷ್ಟ್ರಗಳ ಗೌರವ ಮತ್ತು ರಕ್ಷಣೆ ಪ್ರಮುಖವಾಗಬೇಕು. ಅವರ ಎಲ್ಲೆಗಳ ವಿಸ್ತರಣೆ ಪ್ರಮುಖವಾಗಬಾರದು.

ಬದಲಿಗೆ ವಿಶ್ವದ ಅಭಿವೃದ್ಧಿ ಕಾರ್ಯಕ್ರಮ ಯಾವುದೇ ಆಗಿರಬಹುದು, ಜ್ಞಾನಾಭಿವೃದ್ಧಿ, ಶಿಕ್ಷಣ, ಬಡತನ ನಿರ್ಮೂಲನ, ಸಂಪನ್ಮೂಲಗಳು ಮತ್ತು ಮಾನವ ಶಕ್ತಿಯನ್ನು ಉತ್ಪಾದನೆಯಲ್ಲಿ ಸಮರ್ಪಕವಾಗಿ ಬಳಸಲು ಸಲಹೆ ಸೂಚನೆಗಳು ಏನೇ ಇರಬಹುದು, ಎಲ್ಲ ವಿಶ್ವ ಸಮಿತಿಯ ಸದಸ್ಯರೂ ಸದಸ್ಯರಾಗಿ ಪಾಲುಗೊಳ್ಳುವಂತೆ ಮಾಡಬೇಕು. ಇದೇ ಶಾಂತಿಯ ಮೂಲ ಮಂತ್ರವಾಗಬೇಕು.

**ಈ ಕಾಲದ ಸೂಚನೆಗಳು:**

ಪರಸ್ಪರ ರಾಷ್ಟ್ರಗಳಲ್ಲಿ ಉಂಟಾಗಬಹುದಾದ ಸಂಘರ್ಷಗಳನ್ನು ಶಸ್ತ್ರಾಸ್ತ್ರ ಬಲಪ್ರದರ್ಶನದ ಮೂಲಕ ಬಗೆಹರಿಸಿಕೊಳ್ಳುವ ಬದಲು ಸಂಧಾನಗಳ ಮೂಲಕ ಬಗೆಹರಿಸಿಕೊಳ್ಳಬೇಕು ಎನ್ನುವ ಅಭಿಪ್ರಾಯ ಇತ್ತೀಚೆಗೆ ಹೆಚ್ಚುತ್ತಿದೆ.

ಐತಿಹಾಸಿಕ ದೃಷ್ಟಿಯಿಂದ ಈ ಶಸ್ತ್ರಗಳ ಉಪಯೋಗ ವಿನಾಶಕ್ಕೆ ಕಾರಣ ಎನ್ನುವ ಸತ್ಯವನ್ನು ಇಂದಿನ ರಾಷ್ಟ್ರಗಳು ಕಂಡುಕೊಳ್ಳುತ್ತಿವೆ. ಇದರಿಂದ ಉಂಟಾಗುತ್ತಿರುವ ವಿನಾಶ, ಮಾನವರ ಮಾರಣ ಹೋಮ, ಇದರಿಂದ ಉಂಟಾಗುವ ದುಃಖ ಇವುಗಳಿಂದ ಈ ಅಭಿಪ್ರಾಯಕ್ಕೆ ಪುಷ್ಟಿ ದೊರೆಯುತ್ತಿದೆ. ಆದುದರಿಂದ ಈ ಅಣುಯುಗದಲ್ಲಿ ನ್ಯಾಯವನ್ನು ಪಡೆಯಲು ಶಸ್ತ್ರಾಸ್ತ್ರಗಳಿಂದ ಸಾಧ್ಯ ಎಂಬುದನ್ನು ಊಹಿಸಲೂ ಸಾಧ್ಯವಾಗುತ್ತಿಲ್ಲ.

ಆದರೂ ಕೂಡ ಕೆಲವು ಜನಗಳಲ್ಲಿ ಈ ಹೆದರಿಕೆಯು ಇನ್ನೂ ಮುಂದುವರಿದಿದ್ದು, ಅದಕ್ಕಾಗಿ ಹೆಚ್ಚಿನ ಹಣವನ್ನು ವೆಚ್ಚ ಮಾಡಲು ಮುಂದೆ ಬರುತ್ತಿದ್ದಾರೆ. ಇತರರ ಮೇಲೆ ಯುದ್ಧ ಮಾಡಲು ನಾವು ಹೀಗೆ ಮಾಡುತ್ತಿಲ್ಲ; ನಮ್ಮ ಮೇಲೆ ಯಾರಾದರೂ ಯುದ್ಧ ಮಾಡಿದರೆ, ಅವರನ್ನು ತಡೆಯಲು ಹೀಗೆ ಮಾಡುತ್ತಿದ್ದೇವೆ ಎಂದು ಅವರು ಹೇಳುತ್ತಾರೆ. ಆದರೆ ಅಂತಹವರನ್ನು ನಂಬದಿರಲು ಸಾಕಷ್ಟು ಕಾರಣಗಳಿಲ್ಲ.

ಆದುದರಿಂದ ಎಲ್ಲ ಮಾನವರಲ್ಲಿಯೂ ಇರುವ ಗುಣಗಳಿಂದಾಗಿ, ಸಭೆ ಮತ್ತು ಸಂಧಾನಗಳ ಮೂಲಕ, ಅವರಲ್ಲಿರುವ ಸಾಮಾನ್ಯ ಗುಣಗಳ ಮೂಲಕ ಒಂದುಗೂಡಿಸಬೇಕು. ಇದರಿಂದಾಗಿ ಅವರು ವಿಭಿನ್ನ ಜನಗಳ ಮಧ್ಯೆ ದ್ವೇಷಕ್ಕೆ



ಬದಲಾಗಿ ಪ್ರೀತಿ, ವಿಶ್ವಾಸಗಳೇ ಹೆಚ್ಚಿನ ಪ್ರಾಮುಖ್ಯ ಪಡೆಯಬೇಕು ಎಂಬ ಅಂಶವನ್ನು ಮನಗಾಣಬೇಕು. ಈ ಪ್ರೀತಿಯು ವಿಶ್ವಾಸದ ಮೂಲಕ ಹತ್ತಾರು ಪ್ರಯೋಜನಗಳನ್ನು ಪಡೆಯುವಂತೆ ಆಗಲು ಅವಕಾಶ ನೀಡಬೇಕು. ಅಂತಹ ಸಹಯೋಗವೇ ಇಂದು ವಿಶೇಷವಾಗಿ ಬೇಕಾಗಿರುವುದು.

* * * *

## ೪. ರಾಜಕೀಯ ಸಂಘಟನೆಗಳು ಮತ್ತು ವಿಶ್ವ ಸಂಘಟನೆ

ಇತ್ತೀಚಿನ ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಗತಿ ಮತ್ತು ವಿಸ್ತಾರವಾದ ಸಂಪರ್ಕ ಜಾಲದಿಂದಾಗಿ ವಿವಿಧ ದೇಶಗಳ ವಿಭಿನ್ನ ವ್ಯಕ್ತಿಗಳೊಡನೆ ಸಂಪರ್ಕ ಸಾಧಿಸಲು ಅನುಕೂಲವಾಗಿದೆ. ಅದಲ್ಲದೇ ಸಾರಿಗೆ ವ್ಯವಸ್ಥೆಯಿಂದಾಗಿ ಒಂದು ದೇಶದ ಜನರು ಸುಲಭವಾಗಿ ಇನ್ನೊಂದು ದೇಶದಲ್ಲಿ ನೆಲೆಸುವ ಹಕ್ಕನ್ನು ಪಡೆದಿರುತ್ತಾರೆ. ಮಾನವನ ವಿಚಾರ ವಿನಿಮಯದಿಂದಾಗಿ ವಿಶಾಲ ಮನೋಭಾವನೆ ಮತ್ತು ಮಾನವ ಸಂಬಂಧವನ್ನು ಬೆಸೆಯುವಲ್ಲಿ ಸಹಕಾರಿಯಾಗಿದೆ. ಪ್ರಪಂಚದಲ್ಲಾಗುತ್ತಿರುವ ಮಹತ್ತರ ಬದಲಾವಣೆಯಿಂದಾಗಿ ವಿಶ್ವದ ಎಲ್ಲ ರಾಜಕೀಯ ಸಂಘಟನೆಗಳು ಪರಸ್ಪರ ಸಮಾಲೋಚನೆ ನಡೆಸಿ, ಅಭಿವೃದ್ಧಿ ವಿಚಾರಗಳಿಗೆ ಹೊಸ ಹಾಗೂ ದೂರದೃಷ್ಟಿಯನ್ನು ರೂಪಿಸಿ ಅವುಗಳನ್ನು ಸಾಧಿಸುವುದಕ್ಕಾಗಿ ಎಲ್ಲರ ಆರ್ಥಿಕ, ಸಾಮಾಜಿಕ ಹಿತಾಸಕ್ತಿಯನ್ನು ಕಾಪಾಡಲು ಮತ್ತು ಎಲ್ಲರ ಜೀವನ ಮಟ್ಟವನ್ನು ಉತ್ತಮಪಡಿಸಲು ಜಾಗತಿಕ ಆಡಳಿತ ಯಂತ್ರವನ್ನು ಬಳಸಿ ಕಾರ್ಯಾಚರಣೆಗೆ ತರಲು ದೃಢ ನಿರ್ಧಾರ ಕೈಗೊಳ್ಳಬೇಕು.

ಇಂದು ಯಾವ ಒಂದು ರಾಜಕೀಯ ಸಂಘಟನೆಯು ಒಂಟಿಯಾಗಿ ತನ್ನ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಸಾಧಿಸುವುದು ಸಾಧ್ಯವಿಲ್ಲ. ಏಕೆಂದರೆ ಅದರ ಬೆಳವಣಿಗೆ ಹಾಗೂ ಅಭಿವೃದ್ಧಿಯು ಇತರ ಎಲ್ಲ ರಾಜಕೀಯ ಸಂಘಟನೆಗಳ ಪ್ರತಿಫಲನವೇ ಆಗಿದ್ದು, ಎಲ್ಲವೂ ಒಟ್ಟಿಗೆ ಅಭಿವೃದ್ಧಿ ಹೊಂದಲು ಸಾಧ್ಯ.

**ಸರ್ವರ ಒಳಿತು**

ಪ್ರಾಕೃತಿಕ ಘನತೆಯಿಂದಾಗಿ ಅದರ ಸದಸ್ಯರ ನೆರವಿನಿಂದಾಗಿ ಮಾನವ ಕುಟುಂಬವೂ ಮೊದಲಿನಿಂದಲೂ ಅಸ್ತಿತ್ವದಲ್ಲಿದ್ದಿತು. ಇದರಿಂದಾಗಿ ಸರ್ವರ ಒಳಿತನ್ನು ಸಾಧಿಸುವ ಉದ್ದೇಶ ಮತ್ತು ಧ್ಯೇಯ ಎಂದೆಂದಿಗೂ ಶಾಶ್ವತವಾಗಿರುತ್ತದೆ.

ಹಿಂದಿನ ಕಾಲದಲ್ಲಿ ವಿವಿಧ ರಾಜಕೀಯ ಸಂಘಟನೆಗಳು ರಾಜತಾಂತ್ರಿಕತೆಯ ಮೂಲಕ, ಇಲ್ಲವೇ ಉನ್ನತ ಶ್ರೇಣಿಯ ಸಭೆಗಳ ಮೂಲಕ ಹಾಗೂ ರಾಜಕೀಯ ಒಪ್ಪಂದಗಳ ಮೂಲಕ ಸಾರ್ವತ್ರಿಕ ಒಳಿತನ್ನು ಸಾಧಿಸುತ್ತಿತ್ತು. ಉದಾಹರಣೆಗೆ



ರಾಷ್ಟ್ರೀಯ ಕಾನೂನುಗಳ ಮೂಲಕ ಅಥವಾ ಅಂತರರಾಷ್ಟ್ರೀಯ ಕಾನೂನುಗಳ ಮೂಲಕ ಸರ್ವಸಮ್ಮತವಾದ ಕೆಲಸಗಳನ್ನು ಮಾಡುತ್ತಿದ್ದವು.

ಆದರೆ ಇತ್ತೀಚೆಗೆ ಮಾನವ ಕುಟುಂಬ ಮತ್ತು ಸಾರ್ವತ್ರಿಕ ಒಳಿತಿನ ವಿಷಯಗಳಲ್ಲಿ ಸಾಕಷ್ಟು ಬದಲಾವಣೆಗಳು ಉಂಟಾಗಿವೆ. ಇದರಿಂದಾಗಿ ಹೊಸ ಸಮಸ್ಯೆಗಳು ಉದ್ಭವವಾಗಿವೆ. ಅದರಲ್ಲಿಯೂ ರಕ್ಷಣೆ ಮತ್ತು ವಿಶ್ವದ ಶಾಂತಿಯ ವಿಷಯಗಳು ತುಂಬ ತ್ವರಿತಗತಿಯದಾಗಿದ್ದು, ಸಂಕೀರ್ಣವಾಗಿವೆ.

ವಿವಿಧ ರಾಜಕೀಯ ಸಂಘಟನೆಗಳು ಪ್ರತ್ಯೇಕವಾಗಿದ್ದು, ಎಲ್ಲರೂ ಸಮಾನವಾಗಿರುವುದರಿಂದ, ಎಷ್ಟೇ ಸಭೆಗಳನ್ನು ನಡೆಸಿದರೂ ಕೂಡ, ಎಷ್ಟೇ ನ್ಯಾಯದ ಮಾರ್ಗಗಳನ್ನು ಹುಡುಕಿಕೊಂಡರೂ ಕೂಡ, ಈ ಮೇಲೆ ಹೇಳಿದ ಸಮಸ್ಯೆಗಳಿಗೆ ಪರಿಹಾರಗಳನ್ನು ಹುಡುಕುವುದರಲ್ಲಿ ಸಫಲವಾಗಿಲ್ಲ. ಅವರೆಲ್ಲರಿಗೂ ಇದನ್ನು ಮಾಡಬೇಕೆಂಬ ಆಸೆಯಿದೆ ಮತ್ತು ಉತ್ಸಾಹವಿದೆ. ಅದರೆ ಅದರ ರಚನೆಯ ನ್ಯೂನತೆಯಿಂದಾಗಿ ಅವು ಫಲ ನೀಡುತ್ತಿಲ್ಲ.

ಆದುದರಿಂದ ಈ ಐತಿಹಾಸಿಕ ಸಮಯದಲ್ಲಿ ಈಗಿರುವ ರೀತಿಯ ಆಡಳಿತಾತ್ಮಕ ರಚನೆಗಳು ಮತ್ತು ಅದರ ಅಧಿಕಾರ ಚಲಾಯಿಸುವ ವಿಧಾನಗಳು, ನಾವು ಸಾಧಿಸಬೇಕೆಂದುಕೊಂಡಿರುವ ಸರ್ವರ ಒಳಿತನ್ನು ಸಾಧಿಸಲು ಸಾಧ್ಯವಿಲ್ಲ.

**ಸರ್ವರ ಒಳಿತು ಮತ್ತು ರಾಜಕೀಯ ಅಧಿಕಾರ:**

ಸರ್ವರ ಒಳಿತು ಮತ್ತು ಸಾರ್ವಜನಿಕ ಅಧಿಕಾರಕ್ಕೆ ಒಂದು ವಿಧವಾದ ಸಂಬಂಧವಿದೆ. ನೈತಿಕ ಮೌಲ್ಯಗಳು ಎಲ್ಲರ ಕಲ್ಯಾಣವನ್ನು ಸಾಧಿಸಬೇಕಾದರೆ, ಅದಕ್ಕೆ ಅಧಿಕಾರ ಬೇಕೇಬೇಕು. ಆದುದರಿಂದ ಇಂತಹ ಒಳ್ಳೆಯದನ್ನು ಸಾಧಿಸಬೇಕಾದರೆ, ಕೌಟುಂಬಿಕ ಜೀವನದ ಐತಿಹಾಸಿಕ ವಿಕಾಸವನ್ನು ಗಮನಿಸಿ, ಅಧಿಕಾರದ ರೂಪವನ್ನು ಪಡೆದು ಕಾರ್ಯ ನಿರ್ವಹಿಸಬೇಕು.

ಇಂದು ಸರ್ವರ ಒಳಿತನ್ನು ಸಾಧಿಸಬೇಕಾದರೆ, ಅದಕ್ಕೆ ಸಾರ್ವತ್ರಿಕ ಅಧಿಕಾರವಿರಬೇಕು; ಇದಕ್ಕೆ ಸಾಕಷ್ಟು ವಿಶಾಲವಾದ ಅಧಿಕಾರವಿದ್ದು, ಇಡೀ ವಿಶ್ವದ ಸಮಸ್ಯೆಯನ್ನು ಗಮನಿಸುವಂತೆ ಮಾಡಬೇಕು. ಆದುದರಿಂದ ನೈತಿಕತೆಯೂ ಕೂಡ ಉಪಯೋಗಕ್ಕೆ ಬರಬೇಕಾದರೆ ಅದಕ್ಕೆ ಸಾಕಷ್ಟು ವಿಶಾಲವಾದ ಸಾರ್ವತ್ರಿಕ ರಾಜಕೀಯ ಅಧಿಕಾರವಿರಲೇಬೇಕು.

**ಸಾರ್ವತ್ರಿಕ ಒಪ್ಪಿಗೆಯಿಂದ**

ವಿಶ್ವವಿಡೀ ಸಾರ್ವಜನಿಕ ಅಧಿಕಾರವಿರುವ ಹಾಗೂ ಅವುಗಳನ್ನು ಚಲಾಯಿಸಲು ಮಾರ್ಗಗಳಿರುವ ಒಂದು ಸಾರ್ವಜನಿಕ ಪ್ರಾಧಿಕಾರವನ್ನು ಸಾರ್ವತ್ರಿಕ ಒಪ್ಪಿಗೆಯಿಂದ

ತರಬೇಕೇ ಹೊರತು, ಅದನ್ನು ಬಲಾತ್ಕಾರದಿಂದ ಹೇರಬಾರದು. ಅಂತಹ ಪ್ರಾಧಿಕಾರವು ತನ್ನ ನಿಷ್ಠೆ ಮತ್ತು ನಿಷ್ಪಕ್ಷಪಾತ ದೃಷ್ಟಿಯಿಂದ, ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬೇಕು. ಅಂದರೆ ಅದರ ಕಾರ್ಯಗಳು ಇಡೀ ವಿಶ್ವದ ಕಲ್ಯಾಣಕ್ಕಾಗಿ ಇರಬೇಕು. ಆದರೆ ನಿಜವಾದ ಸಮಸ್ಯೆಯೇನೆಂದರೆ ಬಲಾತ್ಕಾರದಿಂದ ಕೆಲಸ ಮಾಡುವ ಇಡೀ ವಿಶ್ವಕ್ಕೆ ಸೀಮಿತವಾಗಿ ಸಮಸ್ಯೆಯು ಏಕಮುಖವಾಗಿರುತ್ತದೆ. ಇದು ಆಗದೇ ಇದ್ದರೂ ಕೂಡ, ಅದು ಮಾಡುವ ಕಾರ್ಯಗಳನ್ನು ಜನಗಳು ಅಪನಂಬಿಕೆಯಿಂದ, ಪಕ್ಷಪಾತದಿಂದ ನೋಡುವಂತೆ ಕಾಣುತ್ತದೆ. ಇದರಿಂದಾಗಿ ಅದರ ಸಾಫಲ್ಯವೇ ಹೊರಟುಹೋಗುತ್ತದೆ.

ರಾಜಕೀಯ ಸಂಘಟನೆಗಳಲ್ಲಿ, ಅವರವರ ಆರ್ಥಿಕ ಪ್ರಗತಿ, ಮಿಲಿಟರಿ ಶಕ್ತಿಗಳ ವಿಷಯಗಳಲ್ಲಿ ಅಭಿಪ್ರಾಯಭೇದಗಳಿದ್ದರೂ, ನ್ಯಾಯ ವಿಷಯಗಳಲ್ಲಿ ಹಾಗೂ ಅವರ ನೈತಿಕ ಬಲದ ವಿಷಯಗಳಲ್ಲಿ ಸೂಕ್ಷ್ಮ ಅಭಿಪ್ರಾಯಗಳನ್ನು ಹೊಂದಿರುತ್ತಾರೆ. ಆದುದರಿಂದ ಬಲಾತ್ಕಾರವಾಗಿ ಹೇರಲ್ಪಟ್ಟ ಪ್ರಾಧಿಕಾರದ ಬಗ್ಗೆ ಸುಲಭವಾಗಿ ವಿಧೇಯತೆಯನ್ನು ತೋರಿಸುವುದಿಲ್ಲ. ಏಕೆಂದರೆ ಈ ಪ್ರಾಧಿಕಾರವನ್ನು ಅವರು ರಚಿಸಲಿಲ್ಲ ಅಥವಾ ತಮ್ಮ ಸ್ವ ಇಚ್ಛೆಯಿಂದ ಅದಕ್ಕೆ ತಮ್ಮ ಒಪ್ಪಿಗೆ ನೀಡಲೂ ಇಲ್ಲ ಎಂಬುದು ಅವರಿಗೆ ತಿಳಿದಿರುತ್ತದೆ.

**ವೈಯಕ್ತಿಕ ಹಕ್ಕುಗಳು:**

ವೈಯಕ್ತಿಕ ರಾಜಕೀಯ ಸಂಘಟನೆಗಳ ಕಲ್ಯಾಣ ಇದ್ದ ಹಾಗೆ ವೈಯಕ್ತಿಕ ಮಾನವನ ಒಳಿತನ್ನು ತೀರ್ಮಾನಿಸವುದು ಸಾಧ್ಯವಿಲ್ಲ. ಆದುದರಿಂದ ಸಾರ್ವತ್ರಿಕ ಸಂಘಟನೆಗಳು, ಮಾನವನ ಮಾನ್ಯತೆ, ಗೌರವ, ಹಕ್ಕುಗಳನ್ನು ಗೌರವಿಸಬೇಕು. ಇದನ್ನು ನೇರವಾದ ಕಾರ್ಯಾಚರಣೆಗಳಿಂದ ಮಾಡಬಹುದು ಅಥವಾ ವಿಶ್ವದ ಪ್ರಮಾಣದಲ್ಲಿ ರಾಜಕೀಯ ಸಂಘಟನೆಗಳು ನಿಗದಿತವಾದ ಕಾರ್ಯಗಳನ್ನು ಮಾಡುವುದರಿಂದ ನಿರ್ವಹಿಸಬಹುದು.

**ಪೂರಕ ತತ್ವಗಳು:**

ರಾಜಕೀಯ ಸಂಘಟನೆಯ ವ್ಯಾಪ್ತಿಯೊಳಗೆ ಬರುವ ವೈಯಕ್ತಿಕ ಸಂಬಂಧಗಳನ್ನು ನಾವು ಯಾವ ರೀತಿ ಸುಧಾರಿಸುತ್ತೇವೆಯೋ, ಅದೇ ರೀತಿಯಲ್ಲಿ ರಾಜಕೀಯ ಸಂಘಟನೆ ಹಾಗೂ ಸಾರ್ವತ್ರಿಕ ಪ್ರಾಧಿಕಾರವೂ ಕೆಲಸ ಮಾಡಬೇಕು. ಅಂದರೆ ವಿಶ್ವ ಸಂಘಟನೆಯ ಸಾರ್ವತ್ರಿಕ ಪ್ರಾಧಿಕಾರವು ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸಮಸ್ಯೆಗಳು ಮಾನವನ ಒಳಿತಿಗಾಗಿ ಹೇಗೆ ಉಪಯೋಗವಾಗುತ್ತವೆಯೋ ಹಾಗೇ ಅವುಗಳನ್ನು ಸಾಧಿಸಬೇಕು. ಏಕೆಂದರೆ



ಇಂತಹ ದೊಡ್ಡ ಹಾಗೂ ಕ್ಲಿಷ್ಟ ಸಮಸ್ಯೆಗಳನ್ನು ವೈಯಕ್ತಿಕ ಸಂಘಟನೆಗಳು ಮಾಡಲಾರವು. ಆದರೆ ಸಾರ್ವತ್ರಿಕ ಸಂಘಟನೆಗಳು ವೈಯಕ್ತಿಕ ಸಂಘಟನೆಗಳನ್ನು ಮಿತಿಗೊಳಿಸಬಾರದು ಹಾಗೂ ಅದರ ಸ್ಥಾನವನ್ನು ಆಕ್ರಮಿಸಬಾರದು. ಅದಕ್ಕೆ ಬದಲಾಗಿ ಸಾರ್ವತ್ರಿಕ ಸಂಘಟನಾ ಸಂಸ್ಥೆಗಳು ಪ್ರತಿಯೊಂದು ಸಂಘಟನೆಯ ನಾಗರಿಕರ ಪರವಾಗಿ ಕೆಲಸ ನಿರ್ವಹಿಸಿ, ಅವರಿಗೆ ಬೇಕಾದ ಗೌರವಾನ್ವಿತ ಸ್ಥಾನ, ನ್ಯಾಯ, ನೈತಿಕತೆ ಹಾಗೂ ರಕ್ಷಣೆ ಒದಗಿಸಬೇಕು.

**ಇತ್ತೀಚಿನ ಬೆಳವಣಿಗೆ**

ವಿಶ್ವದಲ್ಲಿ ಶಾಂತಿಯನ್ನು ಸ್ಥಾಪಿಸುವ ಉದ್ದೇಶದಿಂದ ೧೯೪೫ರ ಜೂನ್ ೨೬ರಂದು ವಿಶ್ವಸಂಸ್ಥೆಯು ಸ್ಥಾಪನೆಯಾಯಿತು. ಇದು ಅನೇಕ ಅಂಶಗಳನ್ನೊಳಗೊಂಡಿದೆ. ಅದರ ಮುಖ್ಯ ಉದ್ದೇಶಗಳನ್ನು ಈ ರೀತಿಯಾಗಿ ಹೇಳಬಹುದು. ಮುಖ್ಯವಾಗಿ ಅಂತರರಾಷ್ಟ್ರೀಯ ಶಾಂತಿ ಹಾಗೂ ಭದ್ರತೆಗಳನ್ನು ಕಾಪಾಡುವುದು; ಸಮಾಜದ ಅಸ್ತಿತ್ವದಲ್ಲಿರುವ ಸದಸ್ಯ ರಾಷ್ಟ್ರಗಳ ನಡುವೆ ಪರಸ್ಪರ ಸಮಾನ ಮನೋಭಾವನೆ ಮತ್ತು ಸೌಹಾರ್ದತೆಯ ವಾತಾವರಣ ನಿರ್ಮಿಸುವುದು, ಮತ್ತು ಆರ್ಥಿಕ, ಸಾಮಾಜಿಕ, ಮಾನವೀಯ ಸಮಸ್ಯೆಗಳನ್ನು ಬಗೆಹರಿಸಲು ಸಹಕರಿಸುವುದು.

ಮೇಲಿನ ಈ ಎಲ್ಲ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ ಡಿಸೆಂಬರ್ ೧೦, ೧೯೪೮ರಂದು ಎಲ್ಲ ರಾಷ್ಟ್ರಗಳಿಂದ ಸದಸ್ಯರನ್ನು ಕರೆದು, ವಿಶ್ವಸಂಸ್ಥೆಯ ಮೂಲಭೂತ ತತ್ವಗಳನ್ನು ಘೋಷಿಸಿತು. ಇದಕ್ಕೆ ಕೆಲವು ರಾಷ್ಟ್ರಗಳ ವಿರೋಧವಿದ್ದರೂ ಬಹುರಾಷ್ಟ್ರಗಳು ಅನುಮೋದನೆ ನೀಡಿದವು. ಶಾಂತಿಯನ್ನು ಬಯಸುವ ಯಾವುದೇ ದೇಶವು ಇದರ ಸದಸ್ಯತ್ವವನ್ನು ಪಡೆದುಕೊಳ್ಳುವ ಅವಕಾಶ ನೀಡಲಾಯಿತು. ಇದು ತನ್ನ ಅನೇಕ ಅಂಗಸಂಸ್ಥೆಗಳ ಸಹಾಯದಿಂದ ರಾಷ್ಟ್ರ ರಾಷ್ಟ್ರಗಳ ನಡುವೆ ಯುದ್ಧಗಳನ್ನು ತಡೆಗಟ್ಟಿ ಶಾಂತಿ ನೆಲೆಸಲು ಪ್ರಯತ್ನಿಸುವುದಲ್ಲದೆ ಆರೋಗ್ಯ, ಶಿಕ್ಷಣ, ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಸದಸ್ಯತ್ವ ಹೊಂದಿದ ಎಲ್ಲ ರಾಷ್ಟ್ರಗಳಿಗೂ ಸಹಕಾರ ಮತ್ತು ಸಲಹೆಯನ್ನು ನೀಡುತ್ತದೆ. ವಿಶ್ವ ಶಾಂತಿಗಾಗಿ ಐಕ್ಯತೆಯನ್ನು ಸಾಧಿಸಲು ಭದ್ರತಾ ಸಮಿತಿಯನ್ನು ಹೊಂದಿದೆ. ಯಾವುದೇ ರಾಷ್ಟ್ರವು ಶಾಂತಿ ಮತ್ತು ಭದ್ರತೆಯನ್ನು ಕಾಪಾಡದಿದ್ದಲ್ಲಿ, ತಕ್ಕ ಕ್ರಮ ತೆಗೆದುಕೊಳ್ಳುತ್ತದೆ. ಅದೇ ರೀತಿ ರಾಷ್ಟ್ರಗಳ ನಡುವೆ ಉಂಟಾಗುವ ವಿವಾದ, ಯುದ್ಧ ಮತ್ತು ಪ್ರತೀಕಾರಗಳಿಂದಲ್ಲದೇ ನ್ಯಾಯಬದ್ಧವಾದ ರೀತಿಯಲ್ಲಿ ಅಂತರರಾಷ್ಟ್ರೀಯ ನ್ಯಾಯಾಲಯದ ಮೂಲಕ ಬಗೆಹರಿಸುತ್ತದೆ.

* * * *

## ೫. ಸೃಜನಶೀಲತೆ ಮತ್ತು ಸಮಾಜಸೇವೆಗಾಗಿ ಪ್ರಾದೇಶಿಕ ಅಭಿವೃದ್ಧಿಗೆ ಪೂರಕ ಯೋಜನೆ

ಪ್ರಜೆಗಳೆಲ್ಲರಲ್ಲೂ ಪ್ರಾಮಾಣಿಕತೆ ತತ್ವನಿಷ್ಠೆ ಮತ್ತು ಗಾಢವಾದ ವಿಶ್ವಾಸಪೂರ್ಣ ಆತ್ಮೀಯ ಬಂಧುತ್ವ ಬೆಸೆದು ವಿಶ್ವದ ಭವಿಷ್ಯ ಉಜ್ವಲಗೊಳ್ಳಬೇಕು. ಪರಿಶುದ್ಧ ಪ್ರೀತಿ, ವಿಭಿನ್ನ ಮಟ್ಟದ ನೈತಿಕ ಪರೀಕ್ಷೆ ಮುಂತಾದ ಸೃಜನಶೀಲತ್ವದಿಂದೊಡಗೂಡಿದ ಮೌಲ್ಯಗಳನ್ನು ಅಳವಡಿಸಿಕೊಳ್ಳುವಂತಹ ವಾತಾವರಣವಿರಬೇಕು. ಇದಕ್ಕೆ ಮುಖ್ಯವಾಗಿ ಸಮೃದ್ಧಿ ಮತ್ತು ವೈವಿಧ್ಯಪೂರ್ಣ ಜೀವನದ ಅವಕಾಶವನ್ನು ಕಲ್ಪಿಸಿಕೊಡುವ ಶಿಕ್ಷಣ ಪ್ರತಿಯೊಬ್ಬ ಪ್ರಜೆಯೂ ತನ್ನ ಮಕ್ಕಳಿಗೆ ಕೊಡಲನುವಾಗಬೇಕು. ವೈಜ್ಞಾನಿಕ ಮತ್ತು ತಾಂತ್ರಿಕ ಮೌಲ್ಯಗಳನ್ನು ಬೋಧಿಸುವುದರ ಜೊತೆಗೆ ನೀತಿಯುಕ್ತ ವಿಚಾರಗಳು, ವ್ಯಕ್ತಿ ಮತ್ತು ಬಾಹ್ಯಪ್ರಪಂಚದ ಮಧ್ಯೆ ಸಂಬಂಧ ಸ್ಥಾಪಿತವಾಗಬೇಕು. ಜನರಲ್ಲಿ ವ್ಯವಹರಿಸುವ ಸಾಮರ್ಥ್ಯತೆ, ಸಮಾನತೆ, ಗೌರವ, ಇತರ ಧರ್ಮಗಳ ಬಗ್ಗೆ ಗೌರವ ಮುಂತಾದ ವಿಚಾರಗಳ ಬಗ್ಗೆ ಮಕ್ಕಳಿಗೆ ಮನದಟ್ಟು ಮಾಡಬೇಕು.

ಒಟ್ಟಾರೆ ಹೇಳುವುದಾದರೆ ನಾವೆಲ್ಲರೂ ಒಬ್ಬನೇ ಸೃಷ್ಟಿಕರ್ತನ ಮಕ್ಕಳು. ಎಲ್ಲರಲ್ಲಿಯೂ ದೈವೀಶಕ್ತಿಯು ಅಪಾರವಾದದ್ದು, ಇಲ್ಲಿ ಯಾರನ್ನು ಅಲ್ಪರೆಂದು ಭಾವಿಸಕೂಡದು. ಯಾರೂ ಮೇಲಲ್ಲ, ಕೀಳೂ ಅಲ್ಲ. ಇಲ್ಲಿ ವಾಸಿಸುವ ಪ್ರತಿಯೊಬ್ಬನೂ ಸಮಾನ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಪಡೆದಿರುತ್ತಾನೆ. ಇನ್ನೊಬ್ಬರ ಘನತೆ ಗೌರವಗಳಿಗೆ ಕಳಂಕ ತರದೇ ಗೌರವಯುತವಾದ ಜೀವನ ನಡೆಸಬೇಕೆಂಬುದೇ ದೇವ ಇಚ್ಛೆಯಾಗಿರುತ್ತದೆ. ಭಾವನೆಗಳ ನೆಲೆಯಾದ ಈ ಹೃದಯದಲ್ಲಿ ಪ್ರೀತಿ, ಭಕ್ತಿ, ನಿಸ್ವಾರ್ಥತೆ, ಪರದುಃಖ ಕಾತರತೆ, ಸೇವಾ ಮನೋಭಾವ, ನಿರಹಂಕಾರ ಈ ಎಲ್ಲ ಗುಣಗಳೂ ಇರುತ್ತವೆ. ಅವುಗಳನ್ನು ಅಭಿವ್ಯಕ್ತಿಗೊಳಿಸಿದಾಗ ಎಲ್ಲರೂ ಮಾನವೀಯತೆಯಿಂದ ವಿಶ್ವಮಾನವರಾದಾಗ ಇಡೀ ಪ್ರಪಂಚದಲ್ಲಿ ದ್ವೇಷಕ್ಕೆ ಆಸ್ಪದವೇ ಇರುವುದಿಲ್ಲ. ಎಲ್ಲೆಲ್ಲೂ ಶಾಂತಿ ನೆಲೆಸಿರುತ್ತದೆ.

### ನಂಬಿಕೆ ಮತ್ತು ಕಾರ್ಯಶೀಲತೆಯ ಸಾಮರಸ್ಯ

ಕ್ರಿಶ್ಚಿಯನ್ ಸಂಸ್ಥೆಗಳು ಧರ್ಮ ಪ್ರಚಾರದ ಜೊತೆಗೆ ವಿಜ್ಞಾನ ಮತ್ತು ತಾಂತ್ರಿಕ ಜ್ಞಾನದ ತಿಳುವಳಿಕೆಗಳನ್ನು ನೀಡುತ್ತಿವೆ. ಆದರೂ ಇಲ್ಲಿ ಸೂಕ್ಷ್ಮವಾಗಿ ಧರ್ಮದ



ಬಗ್ಗೆ ಒತ್ತು ಕೊಡುವುದರಿಂದ ಸರ್ಕಾರವೇ ಆಂತರಿಕ ಸಮಿತಿಗಳನ್ನು ರಚಿಸಿ ಸಾಮಾನ್ಯ ವ್ಯಕ್ತಿತ್ವವನ್ನು ರೂಪಿಸುವಂತಹ ಆರ್ಥಿಕ ಸಂಪತ್ತನ್ನು ಸಮರ್ಪಕವಾಗಿ ಬಳಸಲು ಮತ್ತು ಪ್ರವೀಣ್ಯತೆಗೆ ಪ್ರಾಮುಖ್ಯತೆ ಕೊಡಬೇಕು. ಇಲ್ಲಿ ಧಾರ್ಮಿಕ ಮತ್ತು ವಿಜ್ಞಾನ ಉಪದೇಶದ ನಡುವೆ ಗಲಿಬಿಲಿ ಉಂಟಾಗಬಾರದು. ಧಾರ್ಮಿಕ ವಿಚಾರವೂ ಕೂಡ ಮನುಷ್ಯನಿಗೆ ಇರಬೇಕು. ಅದು ಅವನ ಜೀವನದಲ್ಲಿ ನೀತಿಯ ಹಾಗೂ ಧರ್ಮದ ಬೆಳಕನ್ನು ಕೊಡುತ್ತದೆ.

### ಪರಿಪೂರ್ಣ ಶಿಕ್ಷಣ

ಪರಿಪೂರ್ಣ ಶಿಕ್ಷಣವು ಮಾನವನಿಗೆ ಹೃದಯ ಪರಿಶುದ್ಧಿ ಸೇವಾ ಮನೋಭಾವನೆ ನೀತಿ ನಿಯಮಗಳನ್ನು ಕಲಿಸುವುದರ ಜೊತೆಗೆ ಸಾರ್ವತ್ರಿಕ ಶಿಕ್ಷಣದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಅಭಿವೃದ್ಧಿಗೆ ಪೂರಕವಾಗುವ ಶಿಕ್ಷಣವನ್ನು ಮಕ್ಕಳಿಗೆ ನೀಡಲೇಬೇಕು. ಯುವಕರಿಗೆ ಪರಿಪೂರ್ಣವಾದ ಅಡೆತಡೆಗಳಿಲ್ಲದ ಶಿಕ್ಷಣ ನೀಡಬೇಕು. ಅವರಲ್ಲಿ ಧಾರ್ಮಿಕ ಭಾವನೆ ಉಂಟಾಗಬೇಕು ಮತ್ತು ಇತ್ತೀಚೆಗೆ ಆಗುತ್ತಿರುವ ವೈಜ್ಞಾನಿಕ ದೃಷ್ಟಿಕೋನಕ್ಕನುಗುಣವಾಗಿ ನೈತಿಕತೆಯನ್ನು ಅವರು ಅಳವಡಿಸಿಕೊಳ್ಳುವಂತೆ ಮಾಡಬೇಕು. ಹಾಗೆ ಆದಾಗ ಮಾತ್ರ ತಾಂತ್ರಿಕರನ್ನು ಮತ್ತು ಪ್ರಾವೀಣ್ಯ ಪಡೆದವರನ್ನು ಸೃಷ್ಟಿಸಬಹುದು. ಅದರ ಜೊತೆಗೆ ಸಂಸ್ಕೃತಿ, ಸಂಸ್ಕಾರ ಇವೆಲ್ಲವೂ ಮಾನವನ ಸರ್ವತೋಮುಖ ಬೆಳವಣಿಗೆಗೆ ಪೂರಕವಾಗಿ ಪರಿಪೂರ್ಣತೆ ಸಾಧಿಸಿದಂತಾಗುತ್ತದೆ.

### ಸತತ ಪ್ರಯತ್ನ

ಎಲ್ಲಾ ಸೈದ್ಧಾಂತಿಕ ವಿಚಾರಗಳನ್ನು ಪ್ರಾಯೋಗಿಕವಾಗಿ ಅಳವಡಿಸುವಲ್ಲಿ ಅಂತರರಾಜ್ಯ ಮತ್ತು ವಿಶ್ವಮಟ್ಟದಲ್ಲಿ ಸಾಂಘಿಕವಾಗಿ ಶ್ರಮಿಸಬೇಕಾಗುತ್ತದೆ. ಅನೇಕ ಸಾರಿ ಭದ್ರ ಬುನಾದಿಯ ಕ್ರೈಸ್ತ ಶಿಕ್ಷಣವಿಲ್ಲದ ಕಾರಣ ಧಾರ್ಮಿಕ ನಂಬಿಕೆ ಮತ್ತು ಲೌಕಿಕ ವ್ಯಾಪಾರಗಳಿಗೆ ಹೊಂದಾಣಿಕೆಯಾಗುವುದೇ ಇಲ್ಲ. ಇದರಿಂದ ಲೌಕಿಕ ವಿಷಯಗಳು ಪ್ರಾಮುಖ್ಯತೆ ಪಡೆಯುತ್ತವೆ ಮತ್ತು ಧಾರ್ಮಿಕ ವಿಷಯಗಳು ತೀರ ಕೆಳಸ್ತರದಲ್ಲೇ ಉಳಿದುಬಿಡುತ್ತವೆ. ಸಾಮಾಜಿಕ ಸಂಘ ಸಂಸ್ಥೆಗಳು, ರಾಜಕೀಯ ಸಂಘಟನೆಗಳು ಮತ್ತು ಉತ್ಪಾದನಾ ಘಟಕಗಳು, ನ್ಯಾಯಾಂಗ ಸಮಿತಿ, ಹಾಗೂ ಶಿಕ್ಷಣ ಸಂಸ್ಥೆಗಳು ಸಮಾಜವು ಸ್ವತಂತ್ರವಾಗಿರಲು, ಮಾನವನ ಹಕ್ಕುಗಳಿಗೆ ಚ್ಯುತಿ ಬಾರದಂತೆ ಪರಿಪೂರ್ಣತೆಗೆ ಕ್ರಿಯಾಶೀಲವಾಗಬೇಕು. ಇದಕ್ಕೆ ಸತತ ಪ್ರಯತ್ನವೊಂದೇ ದಾರಿಯಾಗಿರುತ್ತದೆ.

**ನಿಧಾನಗತಿಯ ವಿಕಸನ**

ಪ್ರಪಂಚದಲ್ಲಿ ಧಾರಾಳತನದ ಜನ ಅನೇಕರು ಸಿಗುತ್ತಾರೆ. ಅವರಿಗೆ ನ್ಯಾಯಾಡಳಿತ ಪೂರ್ಣವಾಗಿ ಸರಿ ಕಾಣುವುದಿಲ್ಲ; ಇತರ ವ್ಯವಸ್ಥೆಗಳೂ ಸಮರ್ಪಕವೆನಿಸುವುದಿಲ್ಲ. ಅಂತಹವರು ಕ್ರಾಂತಿಯಂತಹ ಬದಲಾವಣೆಗಳನ್ನು ಅಪೇಕ್ಷಿಸುತ್ತಾರೆ. ಸಮಾಜದ ಸುಧಾರಣೆಯಾಗಬೇಕಾದರೆ ತಾಳ್ಮೆಯಿಂದಿರಬೇಕು. ಒಂದು ಹೊಸ ಸೈದ್ಧಾಂತಿಕ ಸಮಾಜವನ್ನು ರಚಿಸಬೇಕೆಂದರೆ ಬಲಪ್ರಯೋಗದಿಂದ ಅಥವಾ ಕ್ರಾಂತಿಕಾರಕ ಬದಲಾವಣೆ ಅಷ್ಟೊಂದು ಸೂಕ್ತವಲ್ಲ. ಅದು ವಿಕಾಸಾತ್ಮಕ ವಾಗಿರಬೇಕು. ನಿಧಾನಗತಿಯಲ್ಲಿದ್ದರೂ ಶಾಶ್ವತ ಬದಲಾವಣೆಯಾಗಿರಬೇಕು. ಹಿಂಸಾತ್ಮಕವಾಗಿರಬಾರದು. ಕ್ರಾಂತಿಕಾರಕ ವಿಚಾರಗಳಿಂದ ಸಮಾಜದ ಸ್ಥಿತಿ ಶೋಚನೀಯವಾಗುವ ಸಂದರ್ಭಗಳುಂಟು. ಜನತೆ ಸ್ವ ಇಚ್ಛೆಯಿಂದಲೇ ಯಾವುದೇ ಬಲವಂತ ಅಥವಾ ಭಯವಿಲ್ಲದೆ ಸಮಾಜದ ಒಳಿತಿಗಾಗಿ ಸದಾ ಪ್ರಯತ್ನಿಸಬೇಕು. ಇದರಿಂದ ಸರ್ಕಾರ ಮತ್ತು ಜನತೆ ಸಮಾಜದ ಒಟ್ಟಾರೆ ಒಳಿತನ್ನು ಮತ್ತು ಪ್ರತಿಯೊಬ್ಬ ವ್ಯಕ್ತಿಯ ನೈತಿಕ ಇಚ್ಛೆ ಮತ್ತು ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳಲು ಅನುವು ಮಾಡಿಕೊಟ್ಟಂತಾಗುತ್ತದೆ.

**ಮಹತ್ತಾದ ಕಾರ್ಯ**

ಕೊನೆಯದಾಗಿ, ಈ ಜಗತ್ತಿನಲ್ಲಿ ಎಲ್ಲರೂ ದೇವರ ಮಕ್ಕಳು. ಆದ್ದರಿಂದ ಪ್ರತಿ ಕುಟುಂಬ, ವ್ಯಕ್ತಿಗಳು, ರಾಜಕೀಯ ಮತ್ತು ಸಾಮಾಜಿಕ ಸಂಘಟನೆಗಳು, ಸರ್ಕಾರ ಮತ್ತು ರಾಷ್ಟ್ರ ರಾಷ್ಟ್ರಗಳ ನಡುವೆ ಮಾನವೀಯ ಮೌಲ್ಯಗಳಲ್ಲೊಂದಾದ ಪ್ರೀತಿ. ಇದು ಬಹಳ ಮುಖ್ಯವಾಗಿದೆ. ಎಲ್ಲರೂ ಪ್ರೀತಿ ಮತ್ತು ಸೌಹಾರ್ದದಿಂದಿರ ಬೇಕೆಂಬುದೇ ದೇವರ ಇಚ್ಛೆಯಾಗಿದೆ. ಅವನ ಇಚ್ಛೆಗೆ ಎಲ್ಲರೂ ವಿಧೇಯರಾಗಿದ್ದು, ಆತ್ಮವನ್ನು ಶುದ್ಧ ಮಾಡಿಕೊಂಡು ನಿಷ್ಕಪಟವಾದ ಸಹೋದರ ಸ್ನೇಹದಿಂದಿರಬೇಕು. ದೇವನಿರ್ಮಿತ ಈ ಜಗತ್ತಿನಲ್ಲಿ ಒಬ್ಬರನ್ನೊಬ್ಬರು ಹೃದಯಪೂರ್ವಕವಾಗಿ ಯಥಾರ್ಥವಾಗಿ ಪ್ರೀತಿಸಿರಿ ಎಂದು ಸೇಂಟ್ ಅಗಸ್ಟಿನ್‌ರವರು ಅಭಿಪ್ರಾಯಪಡುತ್ತಾರೆ. ಎಲ್ಲರೂ ತಮ್ಮ ತಮ್ಮ ಆತ್ಮ ಶುದ್ಧಿಮಾಡಿಕೊಂಡು ಎಲ್ಲರನ್ನು ಪ್ರೀತಿಯಿಂದ ಕಾಣುವ ಈ ಮಹತ್ವದ ಕೈಂಕರ್ಯಕ್ಕೆ ದೃಢಸಂಕಲ್ಪ ಬೇಕು. ಆಗ ಖಂಡಿತವಾಗಿಯೂ ಭೂಮಿಯಲ್ಲಿ ಶಾಶ್ವತವಾಗಿ ನೆಮ್ಮದಿ ಮತ್ತು ಶಾಂತಿ ನೆಲೆಸುತ್ತದೆ.

* * * *